**ಕರ್ನಾಟಕ ಸರ್ಕಾರ**

ಸಂ. ಹೆಚ್‌ಡಿ 426 ಎಸ್‌ಎಎಸ್‌ಟಿ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ: 06.08.2018

**ಅಧಿಸೂಚನೆ**

ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ ಸಂಖ್ಯೆ 44) ರ 10ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ರಚಿಸಲಾಗಿದ್ದ ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ನಿಯಮಗಳು, 2018ರ ಕರಡನ್ನು ಅಧಿಸೂಚನೆ ಸಂಖ್ಯೆ: ಹೆಚ್‌ಡಿ 426 ಎಸ್‌ಎಸ್‌ಟಿ 2017, ದಿನಾಂಕ 27.02.2018 Part-IV-A ರಲ್ಲಿ ಕರ್ನಾಟಕ ರಾಜ್ಯ ಪತ್ರ ನಂ.320 ದಿನಾಂಕ 27.02.2018ರಂದು ಪ್ರಕಟಿಸಲಾಗಿರುತ್ತದೆ. ಸದರಿ ಕರಡು ನಿಯಮಗಳಿಗೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳೇನಾದರು ಇದ್ದಲ್ಲಿ ಸರ್ಕಾರಕ್ಕೆ ಸಲ್ಲಿಸುವಂತೆ ಪ್ರಕಟಿಸಲಾಗಿರುತ್ತದೆ.

ಅದರಂತೆ, ಸದರಿ ಕರ್ನಾಟಕ ರಾಜ್ಯ ಪತ್ರವು ಸಾರ್ವಜನಿಕರಿಗೆ ದಿನಾಂಕ 27.02.2018ರ ನಂತರ ಲಭ್ಯವಾಗಿತ್ತು.

ಸದರಿ ಕರಡು ನಿಯಮಗಳ ಸಂಬಂಧವಾಗಿ ಯಾವುದೇ ಆಕ್ಷೇಪಣೆ / ಸಲಹೆಗಳನ್ನು ರಾಜ್ಯ ಸರ್ಕಾರವು ಸ್ವೀಕರಿಸಿರುವುದಿಲ್ಲ.

ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ ಸಂಖ್ಯೆ: 44)ರ 10ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಕೆಳಕಂಡ ನಿಯಮಗಳನ್ನು ರಚಿಸಿರುತ್ತದೆ.

**ನಿಯಮಗಳು**

**1. ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ನಿಯಮಗಳು, 2018 ಎಂದು ಕರೆಯತಕ್ಕದ್ದು.

(2) ಇವು, ರಾಜ್ಯಪತ್ರದಲ್ಲಿ ಅದರ ಅಂತಿಮ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** (1) ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅಧಿನಿಯಮ" ಎಂದರೆ ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ ಸಂಖ್ಯೆ 44);

(ಬಿ) "ಅನುಬಂಧ" ಎಂದರೆ ಈ ನಿಯಮಗಳಿಗೆ ಸೇರಿಸಲಾದ ಅನುಬಂಧ;

(ಸಿ) "ಸಂಘಗಳು" ಎಂದರೆ;

(i) ಯಾವುದೇ ವಾಣಿಜ್ಯ ಕಾರ್ಯಸಂಸ್ಥೆಯಲ್ಲಿ ಅವರಿಂದ ಬಾಡಿಗೆ ಅಥವಾ ಸ್ವಂತಕ್ಕಾಗಿ ನೀಡಲಾದಂತಹ ಸ್ಥಳಗಳಲ್ಲಿನ ಬಹುವಿಧವಾದ ಅಂಗಡಿಗಳು ಅಥವಾ ವ್ಯಾಪಾರ ಸ್ಥಳಗಳ ಮಾಲೀಕರುಗಳ ಗುಂಪು, ಮತ್ತು;

(ii) ಯಾವುದೇ ಸೂಚಿತ ಸಮಯದಲ್ಲಿ ನೀಡಿರುವಂತೆ (ಅಂಗಡಿಗಳ ಪ್ರದೇಶ ಮತ್ತು ಕಾರ್ಯಸಂಸ್ಥೆ ಸಂಘಗಳು) ಹೆಚ್ಚು ಒಟ್ಟುಗೂಡಿಸುವುದಕ್ಕಾಗಿ ನೀಡಿದ ವ್ಯಾಪ್ತಿಯ ನಿರ್ದಿಷ್ಟ ಪ್ರದೇಶದಲ್ಲಿ ಕೇಂದ್ರೀಕರಿಸಲಾದ ಸ್ವಂತ ಅಂಗಡಿಗಳು ಮತ್ತು ಕಾರ್ಯಸಂಸ್ಥೆಗಳ ಗುಂಪು;

(ಡಿ) "ಸಹಾಯಕ ಪೊಲೀಸ್ ಆಯುಕ್ತರು (ಎಸಿಪಿ) ಅಥವಾ ಉಪ–ವಿಭಾಗೀಯ ಪೊಲೀಸ್ ಅಧಿಕಾರಿ (ಎಸ್‌ಡಿಪಿಓ)" ಎಂದರೆ, ಸಂದರ್ಭಾನುಸಾರ ಸ್ಥಳದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಪೊಲೀಸ್ ಅಧಿಕಾರಿ;

(ಇ) "ನಮೂನೆ" ಎಂದರೆ ಈ ನಿಯಮಗಳಿಗೆ ಸೇರಿಸಲಾದ ನಮೂನೆ;

(ಎಫ್) "ಇನ್ಸ್‌ಪೆಕ್ಟರ್" ಎಂದರೆ ಸ್ಥಳದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿದ ಪೊಲೀಸ್ ಇನ್ಸ್‌ಪೆಕ್ಟರ್;

(ಜಿ) "ಲೈಸನ್ಸ್" ಎಂದರೆ ಕರ್ನಾಟಕ ಪೌರಸಭೆಗಳ ಅಧಿನಿಯಮ, 1965 ಅಥವಾ ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಅಧಿನಿಯಮ, 1964 ಅಥವಾ ಕಾರ್ಖಾನೆಗಳ ಅಧಿನಿಯಮ, 1948 ಅಥವಾ ಕರ್ನಾಟಕ ಶಿಕ್ಷಣ ಅಧಿನಿಯಮ, 1983 ಅಥವಾ ಇತರೆ ಯಾವುದೇ ಅಧಿನಿಯಮ ಅಥವಾ ಈ ಉದ್ದೇಶಕ್ಕಾಗಿ ಸಂಬಂಧಪಟ್ಟ ಅಧಿನಿಯಮಗಳ ಅಡಿಯಲ್ಲಿ ರಚಿಸಲಾದ ನಿಯಮಗಳ ಮೇರೆಗೆ ವಾಣಿಜ್ಯ ಸಂಸ್ಥೆಯನ್ನು ಸ್ಥಾಪಿಸಲು ಅಥವಾ ನಡೆಸಲು ಪಡೆಯಲಾದ, ಸಿಂಧುವಾದ ಅನುಮತಿ ಅಥವಾ ಲೈಸೆನ್ಸ್.

(ಹೆಚ್) "ಲೈಸೆನ್ಸ್ ನೀಡುವ ಪ್ರಾಧಿಕಾರ" ಎಂದರೆ ಕರ್ನಾಟಕ ಪೌರಸಭೆಗಳ ಅಧಿನಿಯಮ, 1976 ಅಥವಾ ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಅಧಿನಿಯಮ, 1964 ಅಥವಾ ಕಾರ್ಖಾನೆಗಳ ಅಧಿನಿಯಮ, 1948 ಅಥವಾ ಕರ್ನಾಟಕ ಶಿಕ್ಷಣ ಅಧಿನಿಯಮ, 1983 ಅಥವಾ ವಾಣಿಜ್ಯ ಸಂಸ್ಥೆಯನ್ನು ನಿರ್ವಹಿಸುವುದಕ್ಕಾಗಿ ಪರವಾನಗಿ ಅಥವಾ ಲೈಸೆನ್ಸ್ ನೀಡುವ ಒಂದು ಸಕ್ಷಮ ಪ್ರಾಧಿಕಾರದ ಅಡಿಯಲ್ಲಿ ಒಂದು ವಾಣಿಜ್ಯ ಸಂಸ್ಥೆಯನ್ನು ಸ್ಥಾಪಿಸಲು ಅಥವಾ ನಡೆಸಲು ಅನುಮತಿ ಅಥವಾ ಪರವಾನಗಿ ನೀಡುವ ಒಂದು ಸಕ್ಷಮ ಪ್ರಾಧಿಕಾರ.

(ಐ) "ಕ್ಷೇತ್ರೀಯ ಸಮಿತಿ" ಎಂದರೆ, 3ನೇ ನಿಯಮದ ಉಪಬಂಧಗಳಿಗನುಸಾರವಾಗಿ ರಚಿಸಲಾದ ಒಂದು ಸಮಿತಿ;

(ಜೆ) "ಮೇಲ್ವಿಚಾರಣಾ ಸಮಿತಿ" ಎಂದರೆ, 8ನೇ ನಿಯಮದ ಉಪಬಂಧಗಳಿಗನುಸಾರವಾಗಿ ರಚಿಸಲಾದ ಒಂದು ಸಮಿತಿ;

(2) ಈ ನಿಯಮಗಳಲ್ಲಿ ಪರಿಭಾಷಿಸಲಾಗದ ಆದರೆ ಬಳಸಲಾದ ಪದಗಳು ಮತ್ತು ಅಭಿವ್ಯಕ್ತಿಗಳು ಎಂಬುದಕ್ಕೆ ಈ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ಗೊತ್ತುಪಡಿಸಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು.

**3. ಕ್ಷೇತ್ರೀಯ ಸಮಿತಿ.–** (1) ಸಾರ್ವಜನಿಕ ಸುರಕ್ಷತಾ ಕ್ರಮಗಳನ್ನು ಕಾರ್ಯಗತಗೊಳಿಸಲು ಮೇಲ್ವಿಚಾರಣಾ ಸಮಿತಿ ನೆರವು ನೀಡಲು ಮತ್ತು ಸಹಾಯ ಮಾಡಲು ತಮ್ಮ ಸ್ಥಳದಲ್ಲಿ ವಾಣಿಜ್ಯ ಕಾರ್ಯಸಂಸ್ಥೆಗಳು ಅಥವಾ ಕಾರ್ಯಸಂಸ್ಥೆಗಳ ಸಮೂಹಗಳಂತಹ ಮಾಲೀಕರುಗಳ ಪ್ರತಿನಿಧಿಗಳನ್ನು ಒಳಗೊಂಡ ಒಂದು ಕ್ಷೇತ್ರೀಯ ಸಮಿತಿ (ಸೆಕ್ಟೊರಲ್ ಸಮಿತಿ) ಯಿಂದ ಇರಬಹುದಾದ ಒಂದು ಸ್ಥಳೀಯ ವಾಣಿಜ್ಯ ಕಾರ್ಯಸಂಸ್ಥೆಗಳು ಅಥವಾ ಕಾರ್ಯಸಂಸ್ಥೆಗಳ ಸಮೂಹ.

(2) ಅಂತಹ ಸಮಿತಿಯ ರಚನೆಯ ಬಗ್ಗೆ, ಆ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಪೊಲೀಸ್ ಇನ್ಸ್‌ಪೆಕ್ಟರ್‌ರವರ ಮೂಲಕ ಸಹಾಯಕ ಪೊಲೀಸ್ ಆಯುಕ್ತರು (ಎಸಿಪಿ) ಅಥವಾ ಉಪ–ವಿಭಾಗೀಯ ಪೊಲೀಸ್ ಅಧಿಕಾರಿಗೆ ಮಾಹಿತಿ ನೀಡತಕ್ಕದ್ದು.

**(4) ಪ್ರತಿಯೊಂದು ಕಾರ್ಯಸಂಸ್ಥೆ ಅಥವಾ ಸಂಘವು ಗಮ್ಯ ನಿಯಂತ್ರಕಗಳು ಮತ್ತು ನಿಗಾವಣೆ ಸಾಧನಗಳ (ಸಿಸಿ ಟಿವಿಗಳು) ಅಡಿಯಲ್ಲಿ ಕನಿಷ್ಠ ತಾಂತ್ರಿಕ ತಪಸೀಲು ಪಟ್ಟಿಗಳ ಸಲಕರಣೆಗಳನ್ನು ಒದಗಿಸತಕ್ಕದ್ದು.–**

**(i) ಗಮ್ಯ ನಿಯಂತ್ರಕ ಸಾಧನಗಳು**

| ಕ್ರ. ಸಂ. | **ತಾಂತ್ರಿಕ ತಪಸೀಲು ಪಟ್ಟಿಗಳು** |
|---|---|
| **(1)** | **(2)** |
| (1) | ಡೋರ್ ಪ್ರೇಮ್ ಮೆಟಲ್ ಡಿಟೆಕ್ಟರ್ ಚೆಕ್‌ಮೇಟ್ (ಡಿಎಫ್‌ಎಂಡಿಸಿ) |
| (2) | ಹ್ಯಾಂಡ್ ಹೆಲ್ಡ್ ಮೆಟಲ್ ಡಿಟೆಕ್ಟರ್ (ಎಚ್‌ಎಚ್‌ಎಂಡಿ) (ಕೈಯಲ್ಲಿ ಹಿಡಿಯುವ ಲೋಹ ಪತ್ತೆದಾರಿ ಸಾಧನ) |
| (3) | ವಾಹನದ ಕೊನೆಯ ಭಾಗವನ್ನು ಕನ್ನಡಿಯಿಂದ ಹುಡುಕುವುದು (ಮೇಲ್ವಿಚಾರಣಾ ಸಮಿತಿಯಿಂದ ನಿರ್ದಿಷ್ಟಪಡಿಸಿದ ಕಾರ್ಯಸಂಸ್ಥೆಗಳಿಗಾಗಿ) |
| (4) | ಸಾಮಾನು ಸರಂಜಾಮುಗಳನ್ನು (ಲಗೇಜುಗಳನ್ನು ಪರಿಕ್ಷೀಸುವ ಸಾಧನ) (ಮೇಲ್ವಿಚಾರಣಾ ಸಮಿತಿಯಿಂದ ನಿರ್ದಿಷ್ಟಪಡಿಸಿದ ಕಾರ್ಯಸಂಸ್ಥೆಗಳಿಗಾಗಿ) |
| (5) | ಸ್ನಿಫರ್‌ಡಾಗ್ಸ್ (ಮೂಸುನಾಯಿ) (ಮೇಲ್ವಿಚಾರಣಾ ಸಮಿತಿಯಿಂದ ನಿರ್ದಿಷ್ಟಪಡಿಸಿದ ಕಾರ್ಯಸಂಸ್ಥೆಗಳಿಗಾಗಿ) |
| (6) | ಮೇಲ್ವಿಚಾರಣಾ ಸಮಿತಿಯಿಂದ ಸೂಚಿಸಲಾದ ಯಾವುದೇ ಇತರೇ ಸಾಧನ ಸಲಕರಣೆಗಳು ಅಥವಾ ಕ್ರಮಗಳು |

**(ii) ನಿಗಾವಣೆ ಸಾಧನಗಳು (ಸಿ ಸಿ ಟಿವಿಗಳು)**

| ಕ್ರ. ಸಂ. | ಕನಿಷ್ಠ ತಾಂತ್ರಿಕ ತಪಸೀಲು ಪಟ್ಟಿಗಳು | |
|---|---|---|
| **(1)** | **(2)** | |
| (1) | ಮಾಪನ ಉಪಕರಣ | ಪೂರ್ಣ ಎಚ್‌ಡಿ 1920X1080 ಅಥವಾ ಉತ್ತಮವಾದ |
| (2) | ಕನಿಷ್ಠ ಪ್ರಕಾಶಗೊಳಿಸುವಿಕೆ | |
| (3) | ಲೆನ್ಸ್‌ಗಳು | ನಾಭಿ ದೂರ 3.6 ಎಂಎಂ ಅಥವಾ ಇನ್ನು ಉತ್ತಮವಾದ |
| (4) | ವ್ಯಾಪಿಸಬಹುದಾದ ದೂರ | ಐಆರ್‌ಎಲ್‌ಇಡಿ (ಇನ್‌ಬಿಲ್ಟ್ ಐಆರ್) – 50 ಯಾರ್ಡ್‌ಗಳು ಅಥವಾ ಇನ್ನು ಉತ್ತಮವಾದ |
| (5) | ಫ್ಲಾಟ್‌ಫಾರಂ ವೀಡಿಯೋ ವ್ಯವಸ್ಥೆ | ಮುಕ್ತ ಅಂತರ್ಜಾಲ ವೀಡಿಯೋ ಸಂಪರ್ಕ ಏರ್ಪಡಿಸುವ ವ್ಯವಸ್ಥೆ (ಓಎನ್‌ವಿಐಎಫ್) ಅನುವರ್ತನಶೀಲ ಅಥವಾ ಸಮಾನ ತೀವ್ರತೆಯ (ಎಚ್. 264) |
| (6) | ಅವಶ್ಯಕವಿರುವ ಸಂಗ್ರಹಣಾ ಸಾಮರ್ಥ್ಯ (ಎನ್.ವಿ.ಆರ್) | |
| (7) | ಮೇಲ್ವಿಚಾರಣಾ ಸಮಿತಿಯಿಂದ ಸೂಚಿಸಲಾದ ಯಾವುದೇ ಇತರೆ ಸಲಕರಣೆಗಳು ಅಥವಾ ಕ್ರಮ | |

(iii) ಪ್ರತಿಯೊಂದು ಕಾರ್ಯಸಂಸ್ಥೆ ಅಥವಾ ಸಂಘವು ಗಮ್ಯ ನಿಯಂತ್ರಕಗಳು ಮತ್ತು ಸಿಸಿ ಟಿವಿ ಕ್ಯಾಮರಗಳಂಥ ವಿದ್ಯುನ್ಮಾನ ಸಾಧನಗಳನ್ನು ನಿರ್ವಹಿಸಲು ತರಬೇತಿ ಹೊಂದಿದ ಹೊರಗುತ್ತಿಗೆ ಏಜೆನ್ಸಿಗಳಿಂದ ಒಬ್ಬ ನೌಕರರನ್ನು ಅಥವಾ ವ್ಯಕ್ತಿಯನ್ನು ಇಟ್ಟುಕೊಂಡಿರತಕ್ಕದ್ದು.

(iv) ಪ್ರತಿಯೊಂದು ಕಾರ್ಯಸಂಸ್ಥೆ ಅಥವಾ ಸಂಘವು ಸಾರ್ವಜನಿಕ ಸುರಕ್ಷತಾ ಕ್ರಮಗಳನ್ನು ಒದಗಿಸುವ ವೆಚ್ಚವನ್ನು ಭರಿಸತಕ್ಕದ್ದು.

(v) ಕ್ಯಾಮರಾಗಳು ಕಾರ್ಯಸಂಸ್ಥೆಯು ಮುಚ್ಚಿರುವ ಸಂದರ್ಭದಲ್ಲೂ ಸಹ 24X7 ರಂತೆ ಕಾರ್ಯನಿರ್ವಹಿಸತಕ್ಕದ್ದು.

(vi) ಕ್ಯಾಮರಾಗಳು ಕಾರ್ಯಸಂಸ್ಥೆಗಳ ಆಗಮನ ಮತ್ತು ನಿರ್ಗಮನ ಸ್ಥಳಗಳಲ್ಲಿನ ಹತ್ತಿರದ ಪ್ರದೇಶಗಳನ್ನು ವ್ಯಾಪಿಸಿರತಕ್ಕದ್ದು ಮತ್ತು ಅಲ್ಲದೆ ಐವತ್ತು ಯಾರ್ಡ್‌ಗಳ ದೂರದವರೆಗೂ ಕಾರ್ಯಸಂಸ್ಥೆಯ ಪಾರ್ಕಿಂಗ್ ಪ್ರದೇಶದ ಆಗಮನ ಮತ್ತು ನಿರ್ಗಮನದ ಸ್ಥಳವನ್ನು ಒಳಗೊಂಡಿರುವಂತಹ ದಾರಿಯಲ್ಲಿರತಕ್ಕದ್ದು.

(vii) ಅವುಗಳು ಮೂವತ್ತು ದಿನಗಳ ಸಂಗ್ರಹಣಾ ಸಾಮರ್ಥ್ಯವನ್ನು ಹೊಂದಿರತಕ್ಕದ್ದು.

(viii) ಕಮೀಷನರೇಟ್‌ನಲ್ಲಿನ ಪೊಲೀಸ್ ಆಯುಕ್ತರು ಮತ್ತು ಜಿಲ್ಲಾ ಪೊಲೀಸ್ ವಿಭಾಗಗಳಲ್ಲಿನ ಪೊಲೀಸ್ ಅಧೀಕ್ಷಕರುಗಳು ಗಮ್ಯ ನಿಯಂತ್ರಕ ಮತ್ತು ಸಿಸಿ ಟಿವಿ ಸಾಧನಗಳಂಥ ವಿದ್ಯುನ್ಮಾನ ಸಾಧನಗಳು ಕಾರ್ಯನಿರ್ವಹಿಸುವ ವಿಷಯದಲ್ಲಿ ಜ್ಞಾನ ಮತ್ತು ಪರಿಣಿತಿ ಹೊಂದಿರುವ ಸಿಬ್ಬಂದಿಯೊಂದಿಗೆ ಒಂದು ವಿಶೇಷ ವಿಭಾಗವನ್ನು ಅಭಿವೃದ್ಧಿಪಡಿಸತಕ್ಕದ್ದು.

5. **ನಿಯತಕಾಲಿಕ ವಿವರಪಟ್ಟಿಕೆಗಳನ್ನು ದಾಖಲು ಮಾಡುವ ಹೊಣೆಗಾರಿಕೆ,–** (1) ಕಾರ್ಯ ಸಂಸ್ಥೆಯನ್ನು ನಡೆಸುತ್ತಿರುವ ಪ್ರತಿಯೊಬ್ಬ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳು ಅಥವಾ ಸಂಘವು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಪೊಲೀಸ್ ಇನ್ಸ್‌ಪೆಕ್ಟರ್‌ರವರಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ನಿಯಮಗಳಿಗೆ ಸೇರಿಸಲಾದ ನಮೂನೆ ಸಂಖ್ಯೆ. 15 ರಲ್ಲಿ ವಿದ್ಯುನ್ಮಾನ ನಮೂನೆಯಲ್ಲಾಗಲೀ ಅಥವಾ ಪ್ರತ್ಯಕ್ಷ (ವಾಸ್ತವಿಕ) ವಾಗಿಯಾಗಲೀ ಒದಗಿಸಲಾದ ಸಾರ್ವಜನಿಕ ಸುರಕ್ಷತಾ ಕ್ರಮಗಳನ್ನು ಯುಕ್ತವಾಗಿ ನಿರ್ವಹಿಸಲಾಗಿದೆ ಮತ್ತು ಸಂಬಂಧಪಟ್ಟ ಸಲಕರಣೆಗಳು ಸುಸ್ಥಿತಿಯಲ್ಲಿವೆ ಎಂದು ಪ್ರಮಾಣೀಕರಿಸುವಂಥ ರೀತಿಯಲ್ಲಿ ನಿಯತಕಾಲಿಕ ವಿವರಪಟ್ಟಿಕೆಗಳನ್ನು ಸಲ್ಲಿಸತಕ್ಕದ್ದು.

(2) ಕಾರ್ಯಸಂಸ್ಥೆಯನ್ನು ನಡೆಸುತ್ತಿರುವ ಪ್ರತಿಯೊಬ್ಬ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳು ಅಥವಾ ಸಂಘವು ಸಕ್ಷಮ ಲೈಸೆನ್ಸ್ ಪ್ರಾಧಿಕಾರದ ಮುಂದೆ ಅರ್ಜಿ ಸಲ್ಲಿಸುವಾಗ ಆ ನಿಯಮಗಳಿಗೆ ಸೇರಿಸಲಾದ ಅರ್ಜಿ ನಮೂನೆ ಸಂಖ್ಯೆ 16 ರೊಂದಿಗೆ ಲೈಸನ್ಸ್‌ನ ನವೀಕರಣವನ್ನು ಲಗತ್ತಿಸತಕ್ಕದ್ದು.

6. **ಪೊಲೀಸ್ ನಿರೀಕ್ಷಕರ ಪ್ರಕಾರ್ಯಗಳು,–** (1) ಪೊಲೀಸ್ ನಿರೀಕ್ಷಕರು ನಮೂನೆ ಸಂಖ್ಯೆ–2 ರಲ್ಲಿ ನಿರ್ದಿಷ್ಟಪಡಿಸಲಾದಂತೆ ಈ ನಿಯಮಗಳ ಅಡಿಯಲ್ಲಿ ಆತನ ಅಧಿಕಾರ ವ್ಯಾಪ್ತಿಯಲ್ಲಿ ಗುರುತಿಸಲಾದ ಕಾರ್ಯಸಂಸ್ಥೆಗಳು ಒಂದು ನೋಂದಣಿ ಪುಸ್ತಕವನ್ನು ನಿರ್ವಹಿಸತಕ್ಕದ್ದು.

(2) ಪೊಲೀಸ್ ನಿರೀಕ್ಷಕರು ಸಂದರ್ಭಾನುಸಾರ ಸಹಾಯಕ ಪೊಲೀಸ್ ಆಯುಕ್ತರಿಗೆ ಅಥವಾ ವಿಭಾಗೀಯ ಪೊಲೀಸ್ ಅಧಿಕಾರಿಯವರಿಗೆ ಪ್ರತಿಯೊಂದು ವಿಭಾಗದಲ್ಲಿನ ಅಧಿಕಾರವ್ಯಾಪ್ತಿಯ ಪ್ರದೇಶದೊಳಗೆ ನಮೂನೆ ಸಂಖ್ಯೆ. 3 ರಲ್ಲಿ ಪರಿಶೀಲನಾ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ನಮೂನೆ ಸಂಖ್ಯೆ 4ರಲ್ಲಿ ಸೂಚಿಸಲಾದ ವರದಿಯು ಪಾಲನೆಯಾಗದಿದ್ದಲ್ಲಿ ಅಧಿಕಾರವ್ಯಾಪ್ತಿಯ ಪ್ರದೇಶದೊಳಗಿರುವ ಶೇ. 10 ರಷ್ಟು ಗೊತ್ತು ಗುರಿಯಿಲ್ಲದ ಕಾರ್ಯಸಂಸ್ಥೆಗಳ ಪರಿಶೀಲನೆಯನ್ನು ಮಾಡತಕ್ಕದ್ದು.

(3) ಪೊಲೀಸ್ ನಿರೀಕ್ಷಕರು ಪರಿಶೀಲನಾ ಸಮಯದಲ್ಲಿ ಈ ಬಗ್ಗೆ ರಚಿಸಲಾಗಿರುವ ವಿಶೇಷ ವಿಭಾಗದ ನೆರವನ್ನು ಪಡೆದುಕೊಳ್ಳತಕ್ಕದ್ದು.

(4) 2ನೇ ತಿಂಗಳಿನ ರಾಜಿಮಾಡಿಕೊಳ್ಳುವ ಶುಲ್ಕವನ್ನು ವಿಧಿಸುವ ದಿನಾಂಕದಿಂದ ಎರಡು ತಿಂಗಳ ಅವಧಿಯೊಳಗೆ ನಿರ್ದೇಶನಗಳನ್ನು ಪಾಲಿಸಲು ಅಂಥ ಯಾವುದೇ ಕಾರ್ಯಸಂಸ್ಥೆಯನ್ನು ನಡೆಸುತ್ತಿರುವ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳು ಅಥವಾ ಸಂಘಗಳಿಂದ ವಿಫಲವಾದ ಯಾವುದೇ ಸಂದರ್ಭದಲ್ಲಿ, ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಪೊಲೀಸ್ ನಿರೀಕ್ಷಕರಿಗೆ ನಮೂನೆ ಸಂಖ್ಯೆ 10 ರಲ್ಲಿ ಸಂಬಂಧಪಟ್ಟ ಸಹಾಯಕ ಪೊಲೀಸ್ ಆಯುಕ್ತರು ಅಥವಾ ಉಪ–ವಿಭಾಗೀಯ ಪೊಲೀಸ್ ಅಧಿಕಾರಿಯವರ ಮೂಲಕ ಮೇಲ್ವಿಚಾರಣಾ ಸಮಿತಿಗೆ ಒಂದು ವರದಿಯನ್ನು ಸಲ್ಲಿಸತಕ್ಕದ್ದು.

(5) ಕಾರ್ಯಸಂಸ್ಥೆಯ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಪೊಲೀಸ್ ನಿರೀಕ್ಷಕರು ನಮೂನೆ ಸಂಖ್ಯೆ 12 ರಲ್ಲಿ ಮೇಲ್ವಿಚಾರಣಾ ಸಮಿತಿಯಿಂದ ಆದೇಶಗಳನ್ನು ಸ್ವೀಕರಿಸಿದ ಮೇಲೆ ನಮೂನೆ ಸಂಖ್ಯೆ. 13 ರಲ್ಲಿ ತಾತ್ಕಾಲಿಕವಾಗಿ ಆ ಸ್ಥಳಗಳನ್ನು ಸೀಲ್ ಮಾಡತಕ್ಕದ್ದು.

(6) ಪೊಲೀಸ್ ನಿರೀಕ್ಷಕರು, ಕಾರ್ಯಸಂಸ್ಥೆಯನ್ನು ಸೀಲ್ ಮಾಡಿದ ಸಮಯದಲ್ಲಿ ಕಾರ್ಯಸಂಸ್ಥೆಯಲ್ಲಿ ಕಂಡುಬರುವ ಕೆಟ್ಟು ಹೋದ ಸರಕುಗಳ ಅಗತ್ಯ ವಿಲೇವಾರಿಗಾಗಿ 24 ಗಂಟೆಗಳ ಸಮಯವನ್ನು ನೀಡತಕ್ಕದ್ದು.

(7) ಪೊಲೀಸ್ ನಿರೀಕ್ಷಕರು ಸಂದರ್ಭಾನುಸಾರ ನಮೂನೆ ಸಂಖ್ಯೆ. 14 ರಲ್ಲಿ ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಹಾಯಕ ಪೊಲೀಸ್ ಆಯುಕ್ತರು ಅಥವಾ ಉಪವಿಭಾಗೀಯ ಪೊಲೀಸ್ ಅಧಿಕಾರಿಯ ಮುಖಾಂತರ ಸಂಬಂಧಪಟ್ಟ ಲೈಸನ್ಸ್ ನೀಡುವ ಪ್ರಾಧಿಕಾರಕ್ಕೆ ಕಾರ್ಯಸಂಸ್ಥೆಯು ಸೀಲ್ ಮಾಡಿರುವ ಬಗ್ಗೆ ವರದಿಯನ್ನು ಕಳುಹಿಸತಕ್ಕದ್ದು.

7. **ಸಹಾಯಕ ಪೊಲೀಸ್ ಆಯುಕ್ತರು ಅಥವಾ ಉಪ–ವಿಭಾಗೀಯ ಪೊಲೀಸ್ ಅಧಿಕಾರಿಯವರ ಪ್ರಕಾರ್ಯಗಳು.–** (1) 6ನೇ ಪ್ರಕರಣದ ಅಡಿಯಲ್ಲಿ ಆ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಸಹಾಯಕ ಪೊಲೀಸ್ ಆಯುಕ್ತರು ಅಥವಾ ವಿಭಾಗೀಯ ಪೊಲೀಸ್ ಅಧಿಕಾರಿಯು, ಸಂದರ್ಭಾನುಸಾರ, ಅಂಥ ಯಾವುದೇ ಕಾರ್ಯಸಂಸ್ಥೆಯನ್ನು ನಡೆಸುತ್ತಿರುವ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ಸಂಘವು ಈ ನಿಯಮಗಳನ್ನು ಸೇರಿಸುವ ನಮೂನೆ ಸಂಖ್ಯೆ. 5 ರಲ್ಲಿರುವಂತೆ ಕಾರಣಕೇಳುವ ನೋಟೀಸ್ ನೀಡಿದ್ದು, ಪಾಲಿಸದಿರುವುದಕ್ಕೆ ಸಂಬಂಧಪಟ್ಟಂಥ ಪೊಲೀಸ್ ನಿರೀಕ್ಷಕರಿಂದ ವರದಿಯನ್ನು ಸ್ವೀಕರಿಸಿದ ಮೇಲೆ ಪಾಲನೆಗಾಗಿ ಹದಿನೈದು ದಿನಗಳ ಅವಧಿಯನ್ನು ನೀಡುವುದು.

(2) ಅಂತಹ ಯಾವುದೇ ಕಾರ್ಯಸಂಸ್ಥೆಯನ್ನು ನಡೆಸುತ್ತಿರುವ ಯಾರೇ ಒಬ್ಬ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ಸಂಘವು, (1)ನೇ ಉಪ–ನಿಯಮದ ಮೇರೆಗೆ ನೀಡಲಾದ ಕಾರಣಕೇಳುವ ನೋಟೀಸನ್ನು ಸ್ವೀಕರಿಸಿದ ಮೇಲೆ ನೋಟೀಸ್‌ನ ನಿರ್ದೇಶನಗಳನ್ನು ಪಾಲಿಸಲು ತಪ್ಪಿದಲ್ಲಿ, ಸಂಬಂಧಪಟ್ಟ ಸಹಾಯಕ ಪೊಲೀಸ್ ಆಯುಕ್ತರು ಅಥವಾ ಉಪ–ವಿಭಾಗೀಯ ಪೊಲೀಸ್ ಅಧಿಕಾರಿಯು ಸಂದರ್ಭಾನುಸಾರ, ಅಂಥ ಕಾರ್ಯಸಂಸ್ಥೆಯನ್ನು ನಡೆಸುತ್ತಿರುವ ಯಾರೇ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳು ಅಥವಾ ಸಂಘದ ಮೇಲೆ ರಾಜಿಮಾಡಿಕೊಳ್ಳುವ ಶುಲ್ಕವನ್ನು ವಿಧಿಸುವುದು.

(ಎ) ಕರ್ತವ್ಯ ಲೋಪದ ಮೊದಲನೇ ತಿಂಗಳಿಗಾಗಿ–5,000/– ರೂ.ಗಳು(ನಮೂನೆ ಸಂಖ್ಯೆ 7 ರಲ್ಲಿ)

(ಬಿ) ಕರ್ತವ್ಯ ಲೋಪದ ಎರಡನೆ ತಿಂಗಳಿಗಾಗಿ –10,000/– ರೂ.ಗಳು (ನಮೂನೆ ಸಂಖ್ಯೆ 8 ರಲ್ಲಿ)

(3) ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಹಾಯಕ ಪೊಲೀಸ್ ಆಯುಕ್ತರು ಅಥವಾ ಉಪ–ವಿಭಾಗೀಯ ಪೊಲೀಸ್ ಅಧಿಕಾರಿಯು, ನಮೂನೆ ಸಂಖ್ಯೆ 6 ರಲ್ಲಿರುವಂತೆ ಕಾರಣಕೇಳುವ ನೋಟೀಸ್ ಅಥವಾ ರಾಜಿಮಾಡಿಕೊಳ್ಳುವ ಶುಲ್ಕದ ಬಗ್ಗೆ ನೋಂದಣಿ ಪುಸ್ತಕವನ್ನು ನಿರ್ವಹಿಸತಕ್ಕದ್ದು.

(4) ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಹಾಯಕ ಪೊಲೀಸ್ ಆಯುಕ್ತರು ಅಥವಾ ಉಪ–ವಿಭಾಗೀಯ ಪೊಲೀಸ್ ಅಧಿಕಾರಿಯು ನಮೂನೆ ಸಂಖ್ಯೆ. 9 ರಲ್ಲಿ ನಿರ್ದಿಷ್ಟಪಡಿಸಲಾದಂತೆ ರಾಜಿಮಾಡಿಕೊಳ್ಳುವ ಶುಲ್ಕಕ್ಕೆ ರಸೀದಿಯನ್ನು ನೀಡತಕ್ಕದ್ದು.

(5) 6ನೇ ನಿಯಮದ, (4)ನೇ ಉಪ–ನಿಯಮದಲ್ಲಿ ನಿರ್ದಿಷ್ಟಪಡಿಸಲಾದಂತೆ ಪೊಲೀಸ್ ನಿರೀಕ್ಷಕರ ವರದಿಯನ್ನು ಸ್ವೀಕರಿಸಿದ ಮೇಲೆ ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಹಾಯಕ ಪೊಲೀಸ್ ಆಯುಕ್ತರು ಅಥವಾ ಉಪ–ವಿಭಾಗೀಯ ಪೊಲೀಸ್ ಅಧಿಕಾರಿಯು ಮೇಲ್ವಿಚಾರಣಾ ಸಮಿತಿಯ ಮುಂದೆ ಆ ವರದಿಯನ್ನು ಮಂಡಿಸತಕ್ಕದ್ದು.

(6) ಆ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಸಹಾಯಕ ಪೊಲೀಸ್ ಆಯುಕ್ತರು ಅಥವಾ ಉಪ–ವಿಭಾಗೀಯ ಪೊಲೀಸ್ ಅಧಿಕಾರಿಯು ಲೈಸನ್ಸ್ ಮಂಜೂರಾತಿ ಪ್ರಾಧಿಕಾರಕ್ಕೆ ಆ ಕಾರ್ಯಸಂಸ್ಥೆಯು ಸೀಲ್ ಮಾಡಿರುವ ಪೊಲೀಸ್ ನಿರೀಕ್ಷಕರ ವರದಿಯನ್ನು ಮುಂದಕ್ಕೆ ಕಳುಹಿಸತಕ್ಕದ್ದು.

(7) ಸಂಗ್ರಹಿಸಲಾದ ರಾಜಿಮಾಡಿಕೊಳ್ಳುವ ಶುಲ್ಕವನ್ನು ಸರ್ಕಾರದಿಂದ ಅಧಿಸೂಚಿಸಬಹುದಾದಂಥ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಯಲ್ಲಿ ಠೇವಣಿಯನ್ನು ಇಡತಕ್ಕದ್ದು.

**8. ಮೇಲ್ವಿಚಾರಣಾ ಸಮಿತಿ.–** (1) ಪೊಲೀಸ್ ಕಮಿಷನರೇಟ್‌ನಲ್ಲಿ ಮೇಲ್ವಿಚಾರಣಾ ಸಮಿತಿಯು, ಅವರವರ ತಮ್ಮ ನಗರಗಳಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಪೊಲೀಸ್ ಆಯುಕ್ತರ ಮೂಲಕ ರಚಿಸತಕ್ಕದ್ದು. ಹಾಗೆ ರಚಿಸಲಾದ ಸಮಿತಿಗಳ ಅಧಿಕಾರ ವ್ಯಾಪ್ತಿಯು ಒಂದು ಉಪ–ವಿಭಾಗವಾಗಿರತಕ್ಕದ್ದು ಮತ್ತು ಅಧಿಕಾರ ವ್ಯಾಪ್ತಿಯು ಪೊಲೀಸ್ ಕಮಿಷನರೇಟ್‌ಗಳಲ್ಲಿರುವ ಸಹಾಯಕ ಪೊಲೀಸ್ ಆಯುಕ್ತರು ಮತ್ತು ಆ ಜಿಲ್ಲೆಗಳಲ್ಲಿನ ಉಪ–ವಿಭಾಗೀಯ ಪೊಲೀಸ್ ಅಧಿಕಾರಿಯ ಅಧಿಕಾರ ವ್ಯಾಪ್ತಿಯೊಂದಿಗೆ ಸಮವ್ಯಾಪಿಯಾಗಿರತಕ್ಕದ್ದು.

(2) ಮೇಲ್ವಿಚಾರಣಾ ಸಮಿತಿಯು ಪೌರನಿಗಮ ಅಥವಾ ಪೌರಸಭೆ, ಕಂದಾಯ ಇಲಾಖೆ ಮತ್ತು ಪೊಲೀಸ್ ಇಲಾಖೆಗಳಿಂದ ಒಬ್ಬ ಪ್ರತಿನಿಧಿಯನ್ನು ಒಳಗೊಂಡಿರುತ್ತದೆ. ಆ ಪ್ರತಿನಿಧಿಗಳು, ಈ ಮುಂದಿನ ಕೇಡರ್‌ನಲ್ಲಿರತಕ್ಕದ್ದು, ಎಂದರೆ:–

(i) ವಲಯ ಆಯುಕ್ತರು ಅಥವಾ ಪೌರ ಆಯುಕ್ತರು, ಸಂದರ್ಭಾನುಸಾರ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯಕ ನಗರ ಯೋಜಕರು ಅಥವಾ ಮೈಸೂರು, ಹುಬ್ಬಳ್ಳಿ–ಧಾರವಾಡ ಮುಂತಾದವುಗಳ ಅಂಥದೇ ಕಾರ್ಪೋರೇಷನ್‌ಗಳ ಸಂಬಂಧದಲ್ಲಿ ಯೋಜನಾ ಅಧಿಕಾರಿ ಅಥವಾ ಪಟ್ಟಣ ಯೋಜನಾ ಅಧಿಕಾರಿ ಅಥವಾ ಇತರೆ ಪೌರ ನಿಗಮಗಳ ಸಂಬಂಧವಾಗಿ ಪಟ್ಟಣ ಯೋಜನಾ ಮೇಲ್ವಿಚಾರಕರ ದರ್ಜೆಗಿಂತ ಕಡಿಮೆಯಿರದಂಥ ಅಧಿಕಾರಿಯನ್ನು ನಾಮನಿರ್ದೇಶನ ಮಾಡತಕ್ಕದ್ದು.

(ii) ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕಂದಾಯ ವಿಭಾಗೀಯ ಅಧಿಕಾರಿಯು, ಸಹಾಯಕ ಕಂದಾಯ ಅಧಿಕಾರಿ ದರ್ಜೆಗಿಂತ ಕಡಿಮೆಯಿರದಂಥ ಅಧಿಕಾರಿಯನ್ನು ನಾಮನಿರ್ದೇಶನ ಮಾಡತಕ್ಕದ್ದು.

(iii) ಸಂದರ್ಭಾನುಸಾರ, ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಹಾಯಕ ಪೊಲೀಸ್ ಆಯುಕ್ತರು ಅಥವಾ ಉಪ–ವಿಭಾಗೀಯ ಪೊಲೀಸ್ ಅಧಿಕಾರಿ;

(iv) ಸಂದರ್ಭಾನುಸಾರ, ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಹಾಯಕ ಪೊಲೀಸ್ ಆಯುಕ್ತರು ಅಥವಾ ಉಪ–ವಿಭಾಗೀಯ ಪೊಲೀಸ್ ಅಧಿಕಾರಿಯು ಮೇಲ್ವಿಚಾರಣಾ ಸಮಿತಿಯ ಸಂಚಾಲಕರಾಗಿರತಕ್ಕದ್ದು.

**9. ಮೇಲ್ವಿಚಾರಣಾ ಸಮಿತಿಯ ಪ್ರಕಾರ್ಯಗಳು.–** (1) ಸಮಿತಿಯು ಈ ಅಧಿನಿಯಮದ ಅಡಿಯಲ್ಲಿ ಅಂಥ ಕಾರ್ಯಸಂಸ್ಥೆಯನ್ನು ಗುರುತಿಸತಕ್ಕದ್ದು ಮತ್ತು ನಮೂನೆ ಸಂಖ್ಯೆ. 1ರಲ್ಲಿ ನಿರ್ದಿಷ್ಟಪಡಿಸಲಾದಂತೆ ಅದನ್ನು ನಿರ್ವಹಿಸತಕ್ಕದ್ದು.

(2) ಮೇಲ್ವಿಚಾರಣಾ ಸಮಿತಿಯು ಪೊಲೀಸ್ ನಿರೀಕ್ಷಕರ ವರದಿಯನ್ನು ಸ್ವೀಕರಿಸಿದ ಮೇಲೆ ಆ ಕಾರ್ಯಸಂಸ್ಥೆಯು, ನಮೂನೆ ಸಂಖ್ಯೆ. 10 ರಲ್ಲಿ ರಾಜಿ ಮಾಡಿಕೊಳ್ಳುವ ಶುಲ್ಕವನ್ನು ಪ್ರತಿ 2ನೇ ತಿಂಗಳು ವಿಧಿಸಿದ ತರುವಾಯವೂ ಸಹ ನಿಯಮಗಳನ್ನು ಪಾಲಿಸಲು ವಿಫಲವಾದಲ್ಲಿ, ಆ ಕಾರ್ಯಸಂಸ್ಥೆಯ ಪ್ರದೇಶದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಹಾಯಕ ಪೊಲೀಸ್ ಆಯುಕ್ತರು ಅಥವಾ ಉಪ–ವಿಭಾಗೀಯ ಪೊಲೀಸ್ ಅಧಿಕಾರಿಯವರ ಮೂಲಕ ಮುಂದಕ್ಕೆ ಕಳುಹಿಸತಕ್ಕದ್ದು. ಪಾಲನೆ ಮಾಡದಿರುವುದಕ್ಕಾಗಿ ಆ ಕಾರ್ಯಸಂಸ್ಥೆಗೆ ಸೀಲ್ ಮಾಡುವುದಕ್ಕಾಗಿ ನಿಯಮಗಳಿಗೆ ಸೇರಿಸಲಾದ ನಮೂನೆ ಸಂಖ್ಯೆ 11ರಲ್ಲಿ ಕಾರಣಕೇಳುವ ನೋಟೀಸನ್ನು ನೀಡತಕ್ಕದ್ದು.

(3) ಅಗತ್ಯವಿದ್ದಲ್ಲಿ, ಮೇಲ್ವಿಚಾರಣಾ ಸಮಿತಿಯು ಕಾರ್ಯಸಂಸ್ಥೆಗೆ ಭೇಟಿ ನೀಡಬಹುದು;

(4) ಮೇಲ್ವಿಚಾರಣಾ ಸಮಿತಿಯು, ಕಾರಣಕೇಳುವ ನೋಟೀಸಿನ ಸ್ಪಷ್ಟೀಕರಣವನ್ನು ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳೊಳಗೆ ನಮೂನೆ ಸಂಖ್ಯೆ 12 ರಲ್ಲಿ ಸೀಲ್ ಮಾಡುವ ಆದೇಶವನ್ನು ಮಾಡತಕ್ಕದ್ದು.

(5) ಮೇಲ್ವಿಚಾರಣಾ ಸಮಿತಿಯು ಸಾರ್ವಜನಿಕ ಸುರಕ್ಷತಾ ಕ್ರಮಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಸೆಕ್ಟೊರಲ್ ಸಮಿತಿಯ ನೆರವನ್ನು ಪಡೆದುಕೊಳ್ಳತಕ್ಕದ್ದು.

**10. ಲೈಸನ್ಸ್ ಪ್ರಾಧಿಕಾರದ ಪ್ರಕಾರ್ಯಗಳು.–** (1) ಲೈಸನ್ಸನ್ನು ನೀಡುವಾಗ ಲೈಸನ್ಸ್ ಪ್ರಾಧಿಕಾರವು ಸಾರ್ವಜನಿಕ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಕಾರ್ಯಗತಗೊಳಿಸುವುದಕ್ಕಾಗಿ ಕಾರ್ಯಸಂಸ್ಥೆಯು ಅವುಗಳನ್ನು ಬದ್ಧಗೊಳಿಸುವಂತೆ ಮಾಡತಕ್ಕದ್ದು.

(2) ಲೈಸನ್ಸ್ ಪ್ರಾಧಿಕಾರವುಲೈಸನ್ಸ್ ನವೀಕರಣದ ಸಮಯದಲ್ಲಿ, ಕಾರ್ಯಸಂಸ್ಥೆಯು ಯಾವುದೇ ಉಲ್ಲಂಘನೆ ಮಾಡದೇ ಸಾರ್ವಜನಿಕ ಸುರಕ್ಷತಾ ಕ್ರಮಗಳನ್ನು ಕಾರ್ಯಗತಗೊಳಿಸುತ್ತಿದೆ ಎಂಬುದನ್ನುಖಚಿತಪಡಿಸಿಕೊಳ್ಳತಕ್ಕದ್ದು.

(3) ಸ್ಥಳಗಳನ್ನು ತಾತ್ಕಾಲಿಕವಾಗಿ ಸೀಲ್ ಮಾಡುವ ಸಂಬಂಧವಾಗಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಹಾಯಕ ಪೊಲೀಸ್ ಆಯುಕ್ತರು ಅಥವಾ ಉಪ–ವಿಭಾಗೀಯ ಪೊಲೀಸ್ ಅಧಿಕಾರಿಯಿಂದ ವರದಿಯನ್ನು ಸ್ವೀಕರಿಸಿದ ಮೇಲೆ, ಲೈಸನ್ಸ್ ಪ್ರಾಧಿಕಾರವು, ಅಂಥ ಯಾವುದೇ ಕಾರ್ಯಸಂಸ್ಥೆಯನ್ನು ನಡೆಸುವ ಯಾರೇ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಅಥವಾ ಸಂಘಕ್ಕೆ ಕಾರಣಕೇಳುವ ನೋಟೀಸನ್ನು ನೀಡತಕ್ಕದ್ದು ಮತ್ತು ಲೈಸನ್ಸ್ ನೀಡುವ ಸಂಬಂಧದಲ್ಲಿ ಉಪಬಂಧಗಳಿಗನುಸಾರವಾದ ಕ್ರಮವನ್ನು ಕೈಗೊಳ್ಳುವುದು.

ಈ ಸರ್ಕಾರಿ ಆದೇಶವು ರಾಜ್ಯಪತ್ರದಲ್ಲಿ ಅದನ್ನು ಪ್ರಕಟಿಸಿದ ದಿನಾಂಕದಿಂದ ಕೂಡಲೇ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ಪದ್ಮಿನಿದೇವಿ)**

ಸರ್ಕಾರದ ಅಧೀನ ಕಾರ್ಯದರ್ಶಿ,
ಗೃಹ ಇಲಾಖೆ, (ಕಾನೂನು ಮತ್ತು ಸುವ್ಯವಸ್ಥೆ)
ಇ–ಮೇಲ್ ulso-home@karnataka.gov.in

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ ಬೆಂಗಳೂರು, ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸುವುದಕ್ಕಾಗಿ ಈ ಇಲಾಖೆಗೆ 500 ಪ್ರತಿಗಳನ್ನು ಒದಗಿಸುವುದು.

**ಸಂಬಂಧಪಟ್ಟವರಿಗೆ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು.
2. ಇಲಾಖೆಗಳ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಗಳು, ವಿಧಾನಸೌಧ/ ವಿಕಾಸಸೌಧ ಮತ್ತು ಬಹುಮಹಡಿಗಳ ಕಟ್ಟಡ.
3. ಪೊಲೀಸ್ ಮಹಾನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರು, ಕರ್ನಾಟಕ, ಬೆಂಗಳೂರು.
4. ಮಾನ್ಯ ಅಡ್ವೋಕೇಟ್ ಜನರಲ್‌ರವರು, ಕರ್ನಾಟಕ ಉಚ್ಚ ನ್ಯಾಯಾಲಯ.
5. ಎಲ್ಲಾ ಪೊಲೀಸ್ ಮಹಾನಿರ್ದೇಶಕರು/ ಎಲ್ಲಾ ಪೊಲೀಸ್ ಅಪರ ಮಹಾ ನಿರ್ದೇಶಕರುಗಳು, ಇಂಟಲಿಜೆನ್ಸ್/ ಅಗ್ನಿಶಾಮಕ ಮತ್ತು ತುರ್ತುಸೇವೆಗಳು/ ಆಂತರಿಕ ಭದ್ರತೆ ವಿಭಾಗ/ ಕಾರಾಗೃಹ/ ನೇಮಕಾತಿ ಮತ್ತು ತರಬೇತಿ/ ಕಾನೂನು ಮತ್ತು ಸುವ್ಯವಸ್ಥೆ/ ಅಪರಾಧಗಳು/ ಅಪರಾಧ ತನಿಖಾ ವಿಭಾಗ/ ಆಡಳಿತ/ ಲೋಕಾಯುಕ್ತ, ಭ್ರಷ್ಟಾಚಾರ ನಿಗ್ರಹ ಸಂಸ್ಥೆ.
6. ಎಲ್ಲಾ ವಲಯದ ಪೊಲೀಸ್ ಮಹಾನಿರೀಕ್ಷಕರು.
7. ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್‌ಗಳು/ ಪೊಲೀಸ್ ಆಯುಕ್ತರುಗಳು/ ಪೊಲೀಸ್ ಅಧೀಕ್ಷಕರುಗಳು.

**ಪ್ರತಿ:**

1. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರಿಗೆ.
2. ಮಾನ್ಯ ಉಪ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಯವರಿಗೆ.
3. ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನರಚನೆ ಮತ್ತು ಇಲಾಖೆಯ ಮಾನ್ಯ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆಯ ಆಪ್ತ ಕಾರ್ಯದರ್ಶಿಯವರಿಗೆ.
5. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರಿಗೆ, (ಪಿಸಿಎಎಸ್) ಗೃಹ ಇಲಾಖೆ.
6. ಸರ್ಕಾರದ ಉಪ–ಕಾರ್ಯದರ್ಶಿಯವರ ಆಪ್ತ ಸಹಾಯಕರಿಗೆ, ಕಾನೂನು ಮತ್ತು ಸುವ್ಯವಸ್ಥೆ/ ಪೊಲೀಸ್ ಸೇವೆಗಳು/ ಅಪರಾಧಗಳು/ ಪಿಎಎಸ್ ಮತ್ತು ಸಮನ್ವಯ.
7. ಬಿಡಿ ಪ್ರತಿಗಳು.

**ನಮೂನೆ ಸಂಖ್ಯೆ. 1**
**(9ನೇ ನಿಯಮದ (1)ನೇ ಉಪ-ನಿಯಮವನ್ನು ನೋಡಿ)**

**ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017**

**ಕರ್ನಾಟಕ ಸಾರ್ವಜನಿಕ ಸುರಕ್ಷತಾ(ಕ್ರಮಗಳ) ಜಾರಿ ನಿಯಮಗಳು, 2018ರ ಅಡಿಯಲ್ಲಿ ಕಾರ್ಯ ಸಂಸ್ಥೆಗಳನ್ನು ಗುರುತಿಸುವುದಕ್ಕಾಗಿ ನಮೂನೆ**

| ಕಾರ್ಯಸಂಸ್ಥೆಯ ಸಂಕೇತ: | |
|---|---|

| | | |
|---|---|---|
| (1) | ಕಾರ್ಯಸಂಸ್ಥೆಯ ಹೆಸರು | |
| (2) | ಸಂಪೂರ್ಣ ವಿಳಾಸದೊಂದಿಗೆ<br>ದೂರವಾಣಿ ಸಂಖ್ಯೆ, ಇ-ಮೇಲ್ ಐಡಿ | |
| (3) | ಸಮೀಪದ ಎಲ್ಲೆ ಗುರುತು | |
| (4) | ಕಾರ್ಯಸಂಸ್ಥೆಯನ್ನು ನಡೆಸುತ್ತಿರುವ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳು ಅಥವಾ ಸಂಘದ ಹೆಸರು ಮತ್ತು ವಿಳಾಸದೊಂದಿಗೆ ಮೊಬೈಲ್ ಸಂಖ್ಯೆ | |
| (5) | ಕಾರ್ಯಸಂಸ್ಥೆಯ ವಿಧ ಎಂದರೆ, ವ್ಯಾಪಾರದ ಸ್ವರೂಪ | |
| (6) | ಪೌರಸಭೆಯ ಪರವಾನಗಿ ಸಂಖ್ಯೆ<br>ಮತ್ತು ಇತರೆ ಯಾವುದೇ ಇಲಾಖಾ ಪರವಾನಗಿಗಳು ಯಾವುದಾದರೂ ಇದ್ದಲ್ಲಿ | ಪರವಾನಗಿ ಸಂಖ್ಯೆ<br>ಸಿಂಧುವಾಗಿರುವವರೆಗೆ |
| (7) | ತರುವಾಯದ ನವೀಕರಣಗಳು | ನವೀಕರಣ ಪರವಾನಗಿ ಸಂಖ್ಯೆ<br>ಸಿಂಧುವಾಗಿರುವವರೆಗೆ |
| (8) | ಕಾರ್ಯಸಂಸ್ಥೆಯ ಮಾಲೀಕ/ ಮಾಲೀಕರ ಸಮೂಹ/ ಬಾಡಿಗೆದಾರ/ ಬಾಡಿಗೆದಾರರುಗಳಿಂದ ಇಡೀ ಕಟ್ಟಡವನ್ನು ಬಳಕೆ ಮಾಡಲಾಗುತ್ತಿದ್ದೇಯೆ? | |
| (9) | ಅದನ್ನು ಬಾಡಿಗೆಗೆ ನೀಡಿದ್ದರೆ, ಮಾಲೀಕನ ಅಥವಾ ನಿರ್ಮಾಣಕಾರ ಅಥವಾ ಯಾವುದೇ ವಾಸದ ಮಹಡಿಯ ಸಂಘದ ವಿವರಗಳು | |

| | | |
|---|---|---|
| (10) | (i)ಕಟ್ಟಡ ಅಥವಾ ಆವರಣದೊಳಗೆ ಆಗಮಿಸಲು ಇರುವ ಸ್ಥಳಗಳ ಸಂಖ್ಯೆ | |
| | (ii) ಕಟ್ಟಡ ಅಥವಾ ಆವರಣಗಳಿಂದ ನಿರ್ಗಮಿಸಲುಇರುವ ಸ್ಥಳಗಳ ಸಂಖ್ಯೆ | |
| (11) | (ಎ) ಕಾರ್ಯಸಂಸ್ಥೆಯಿಂದ ಹತ್ತಿರವಿರುವ ವಾಹನ ನಿಲುಗಡೆ ಜಾಗ ಮತ್ತು ದೂರ | |
| | ದ್ವಿಚಕ್ರ ವಾಹನಗಳ ನಿಲುಗಡೆಯ ಸರಾಸರಿ ಸಂಖ್ಯೆ | |
| | ನಾಲ್ಕುಚಕ್ರವಾಹನಗಳ ನಿಲುಗಡೆಯ ಸರಾಸರಿ ಸಂಖ್ಯೆ | |
| (12) | ಹತ್ತಿರದ ಉಪ–ರಸ್ತೆ ಅಥವಾ ಮುಖ್ಯ ರಸ್ತೆ | |
| (13) | ಇತರೆ ಕಾರ್ಯಸಂಸ್ಥೆಗಳು ಮತ್ತು ಕಾರ್ಯಸಂಸ್ಥೆಯ ಸುತ್ತ–ಮುತ್ತಲು | |
| (14) | (i) ಯಾವುದೇ ಖಾಸಗಿ ಭದ್ರತಾ ಏಜೆನ್ಸಿ ಲಭ್ಯವಿದೆಯೇ? | |
| | (ii) ಹಾಗೆ ಲಭ್ಯವಿದ್ದರೆ, ಏಜೆನ್ಸಿಯ ಹೆಸರು ಮತ್ತು ವಿಳಾಸ | |
| | (iii) ಭದ್ರತಾ ಕಾವಲುಗಾರರು ತರಬೇತಿ ಪಡೆದಿದ್ದಾರೆಯೇ ಅಥವಾ ಇಲ್ಲವೇ | |
| (15) | ಯಾವುದೇ ನಿರ್ದಿಷ್ಟ ಸಮಯದಲ್ಲಿ ಕಾರ್ಯಸಂಸ್ಥೆಗೆ ಭೇಟಿ ನೀಡುವವರ ಸಂಖ್ಯೆ. | |
| (16) | 50 ಯಾರ್ಡ್‌ಗಳ ವ್ಯಾಪ್ತಿಯಲ್ಲಿ ಮತ್ತು ಅದರ ಸುತ್ತಮುತ್ತ ಗುಂಪು ಸೇರಲು ಎಷ್ಟು ಸಾಧ್ಯವಿದೆಯೋ ಅಷ್ಟು? | |
| (17) | ಘಟನೆಗಳ ಬಗ್ಗೆ ಕಾರ್ಯಸಂಸ್ಥೆಯ ದುರ್ಬಲತೆ (ಭೇದ್ಯತೆ) | |
| (18) | ಅಪಾಯ ಸೂಚನೆಯ ಅನುಭವ | |
| (19) | ಈ ಪ್ರದೇಶದಲ್ಲಿ ಸಂಭವಿಸಿರುವ ಹಿಂದಿನ ದುರ್ಘಟನೆಗಳು, ದುರ್ಘಟನೆಗಳು ಸಂಭವಿಸಿದ್ದಲ್ಲಿ, ಆಸ್ತಿಗಳಿಗೆ ಮತ್ತು ಜೀವಕ್ಕೆ ಹಾನಿಯಾದ ಸಂಪೂರ್ಣ ವಿವರಗಳು ಮತ್ತು ಬೆಲೆ | |

| | | |
|---|---|---|
| (20) | ನಿಗಾವಣೆಯು ಎಷ್ಟು ಪರಿಧಿಯವರೆಗೆ ವ್ಯಾಪಿಸಿದೆ ಎಂಬುದರ ಬಗ್ಗೆ ಅಗತ್ಯಪಡಿಸಲಾಗಿದೆ. | |
| (21) | ಹಾಗಿದ್ದರೆ, ಸೂಚಿಸಲಾದ ಗಮ್ಯ ನಿಯಂತ್ರಕ ಯಂತ್ರೋಪಕರಣಗಳ ಸ್ವರೂಪ | |
| (22) | ಸೂಚಿಸಲಾದ ನಿಗಾವಣೆಯ ಯಂತ್ರೋಪಕರಣಗಳ ಸ್ವರೂಪ | |
| (23) | ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಪೊಲೀಸ್ ಠಾಣೆಯ ಹೆಸರು. | |
| (24) | ಪೊಲೀಸ್ ಠಾಣೆ/ ಪೊಲೀಸ್ ಠಾಣೆಯ ಅಧಿಕಾರಿಯ ದೂರವಾಣಿ ಸಂಖ್ಯೆ | |
| (25) | ಅಧಿಕಾರವ್ಯಾಪ್ತಿಯನ್ನು ಹೊಂದಿದ ಉಪ–ವಿಭಾಗೀಯ ಪೊಲೀಸ್ ಅಧಿಕಾರಿ/ ಸಹಾಯಕ ಪೊಲೀಸ್ ಆಯುಕ್ತರು. | |
| (26) | ಸಹಾಯಕ ಪೊಲೀಸ್ ಆಯುಕ್ತರು/ ಉಪ–ವಿಭಾಗೀಯ ಪೊಲೀಸ್ ಅಧಿಕಾರಿಯವರ ದೂರವಾಣಿ ಸಂಖ್ಯೆ / ಮೊಬೈಲ್ ಸಂಖ್ಯೆ | |

ಈ ಮೇಲ್ಕಂಡ ಹಿನ್ನಲೆಯಲ್ಲಿ, ಕಾರ್ಯಸಂಸ್ಥೆಯನ್ನು ಈ ಅಧಿನಿಯಮದ ಅಡಿಯಲ್ಲಿ ಗುರುತಿಸಲಾದ ಕಾರ್ಯಸಂಸ್ಥೆಯಂತೆ ಈ ಮೂಲಕ ಘೋಷಿಸಲಾಗಿದೆ.

ಸದಸ್ಯರ ಸಂಖ್ಯೆ. 1 ಸದಸ್ಯರ ಸಂಖ್ಯೆ. 2 ಸದಸ್ಯರ ಸಂಖ್ಯೆ. 3

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**

// ಆದೇಶಾನುಸಾರ :: ರವಾನಿಸಲಾಗಿದೆ//

ಶಾಖಾಧಿಕಾರಿ

**ನಮೂನೆ ಸಂಖ್ಯೆ. 2**

**(6ನೇ ನಿಯಮದ (1)ನೇ ಉಪ–ನಿಯಮವನ್ನು ನೋಡಿ)**

**ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017–ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ನಿಯಮಗಳು, 2018ರ ಅಡಿಯಲ್ಲಿ ಗುರುತಿಸಲಾದ ಕಾರ್ಯಸಂಸ್ಥೆಗಳ ನೋಂದಣಿ**

| ಕಾರ್ಯಸಂಸ್ಥೆಯ ಸಂಕೇತ: | |
|---|---|

| | | |
|---|---|---|
| (1) | ಕಾರ್ಯಸಂಸ್ಥೆಯ ಹೆಸರು | |
| (2) | ಸಂಪೂರ್ಣ ವಿಳಾಸದೊಂದಿಗೆ ಮೊಬೈಲ್ ಸಂಖ್ಯೆ, ಇ–ಮೇಲ್ ಐಡಿ | |
| (3) | ಹತ್ತಿರದ ಎಲ್ಲೆ ಗುರುತು | |
| (4) | ಮಾಲೀಕರ ಮೊಬೈಲ್ ಸಂಖ್ಯೆಯೊಂದಿಗೆ ಹೆಸರು ಮತ್ತು ವಿಳಾಸ | |
| (5) | ಕಾರ್ಯಸಂಸ್ಥೆಯ ಮಾಲೀಕ/ ವ್ಯವಸ್ಥಾಪಕ/ ವ್ಯಕ್ತಿ ಅಥವಾ ವ್ಯಕ್ತಿಗಳು/ ಸಂಘದ ಹೆಸರು ಮತ್ತು ವಿಳಾಸದೊಂದಿಗೆಮೊಬೈಲ್ ಸಂಖ್ಯೆ | |
| (6) | ಕಾರ್ಯಸಂಸ್ಥೆಯ ವಿಧ ಎಂದರೆ, ವ್ಯವಹಾರದ ಸ್ವರೂಪ | |
| (7) | ಪೌರಸಭೆಲೈಸನ್ಸ್ ಸಂಖ್ಯೆ ಅಥವಾ ಇತರೆ ಯಾವುದೇ ಇಲಾಖಾ ಲೈಸನ್ಸ್‌ಗಳು ಯಾವುದಾದರೂ ಇದ್ದಲ್ಲಿ | ಲೈಸನ್ಸ್ ಸಂಖ್ಯೆ ಸಿಂಧುವಾಗಿರುವವರೆಗೆ |
| (8) | ತರುವಾಯದ ನವೀಕರಣಗಳು | ನವೀಕರಣ ಲೈಸನ್ಸ್ ಸಂಖ್ಯೆ ಸಿಂಧುವಾಗಿರುವವರೆಗೆ |
| (9) | ನಿರ್ದಿಷ್ಟ ಅವಧಿಯಲ್ಲಿ ವಿವರಪಟ್ಟಿಕೆಗಳನ್ನು ಸಲ್ಲಿಸಲಾಗಿದೆಯೇ | ಇಂದಿನವರೆಗೆ ಸಲ್ಲಿಸಿದ ದಿನಾಂಕ: |
| (10) | ಕಾರ್ಯಸಂಸ್ಥೆಯ ಮಾಲೀಕ ಅಥವಾ ಮಾಲೀಕರುಗಳ ಸಮೂಹ ಅಥವಾ ಬಾಡಿಗೆದಾರ ಅಥವಾ | |

| | | |
|---|---|---|
| | ಬಾಡಿಗೆದಾರರುಗಳಿಂದ ಇಡೀ ಕಟ್ಟಡವನ್ನು ಬಳಕೆ ಮಾಡಲಾಗಿದೆಯೇ | |
| (11) | ಅದನ್ನು ಬಾಡಿಗೆಗೆ ನೀಡಿದ್ದರೆ, ಮಾಲೀಕ ಅಥವಾ ನಿರ್ಮಾಣಕಾರರು ಅಥವಾ ಸಂಘದ ವಿವರಗಳು | |
| (12) | ಕಟ್ಟಡ ಅಥವಾ ಆವರಣಗಳಿಗೆ ಆಗಮಿಸಲು ಇರುವ ಸ್ಥಳಗಳ ಸಂಖ್ಯೆ | |
| (13) | ಕಟ್ಟಡ ಅಥವಾ ಆವರಣಗಳಿಂದ ನಿರ್ಗಮಿಸಲು ಇರುವ ಸ್ಥಳಗಳ ಸಂಖ್ಯೆ | |
| (14) | ಗಮ್ಯ ನಿಯಂತ್ರಕಗಳನ್ನು ಅಳವಡಿಸಲಾಗಿರುವ ಮಾದರಿ? | |
| (15) | ಕಾರ್ಯಸಂಸ್ಥೆ ಅಥವಾ ಸಂಘ ಅಥವಾ ನಿರ್ಮಾಣಕಾರ ಮಾಲೀಕನಿಂದ ವಿದ್ಯುನ್ಮಾನ ಸಾಧನಗಳನ್ನು ಅಳವಡಿಸಲಾಗಿದೆಯೇ? | |
| (16) | ಕಾರ್ಯಸಂಸ್ಥೆಗಳಿಂದ ಅಳವಡಿಸಲಾದ ನಿಗಾವಣೆಯ ಮಾದರಿ | |
| (17) | ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಲಾದಂತೆ ಪ್ರದೇಶ/ ನಿರ್ದಿಷ್ಟ ಪರೀಧಿಯೊಳಗೆ/ ನಿಲ್ದಾಣದ ಸ್ಥಳಗಳನ್ನು ಒಳಗೊಂಡು ಭದ್ರತಾ ಯಂತ್ರೋಪಕರಣಗಳು ಸುಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿವೆಯೇ? | |
| (18) | ಕಾರ್ಯಸಂಸ್ಥೆಯಿಂದ ಹತ್ತಿರದ ನಿಲ್ದಾಣದ ಸ್ಥಳಗಳು ಮತ್ತು ದೂರ | |
| (19) | ಸರಾಸರಿಯಂತೆ ಕಾರ್ಯಸಂಸ್ಥೆಗೆ ಭೇಟಿ ನೀಡುವವರ ಒಟ್ಟು ಸಂಖ್ಯೆ | |
| | (ಎ) ಪ್ರತಿ ದಿನ | |
| | (ಬಿ) ಒತ್ತಡದ ಅವಧಿಯಲ್ಲಿ ಒಟ್ಟು ಕೂಡಿಸಿದರೆ | |

| | | |
|---|---|---|
| | ಎಷ್ಟಾಗುತ್ತದೆ.? | |
| (20) | 50 ಯಾರ್ಡ್‌ಗಳ ಪರೀಧಿಯೊಳಗೆ ಮತ್ತು ಅದರ ಸುತ್ತಮುತ್ತಲು ಗುಂಪು ಸೇರಲು ಎಷ್ಟು ಸಾಧ್ಯವಿದೆಯೋ ಅಷ್ಟು? | |
| (21) | ಭಯೋತ್ಪಾದಕ ದಾಳಿಗಳಿಗೆ ಕಾರ್ಯಸಂಸ್ಥೆಯು ಗುರಿಯಾಗಲ್ಪಟ್ಟಿದೆಯೇ? | |
| (22) | ಅಪಾಯ ಸೂಚನೆಯ ಪ್ರತ್ಯಕ್ಷಾನುಭವ | |
| (23) | ಈ ಪ್ರದೇಶದಲ್ಲಿ ಹಿಂದೆ ದುರ್ಘಟನೆಗಳುಸಂಭವಿಸಿದ್ದರೆ, ಆಸ್ತಿಗಳಿಗೆ ಹಾನಿಯಾದ ಬಗ್ಗೆ ಸಂಪೂರ್ಣ ವಿವರಗಳು ಮತ್ತು ಬೆಲೆ | |
| (24) | ಪರಿಶೀಲನೆಯ ದಿನಾಂಕ | |
| (25) | ಪಾಲನೆಯಾಗದಿರುವುದಕ್ಕಾಗಿ ಸಹಾಯಕ ಪೊಲೀಸ್ ಆಯುಕ್ತರು/ ಉಪ–ವಿಭಾಗೀಯ ಪೊಲೀಸ್ ಅಧಿಕಾರಿಯವರಿಗೆ ವರದಿ | ದಿನಾಂಕ |
| (26) | ಪಾಲನೆಯಾಗದಿರುವುದಕ್ಕಾಗಿ ವಿಧಿಸಲಾದ ಮೊದಲನೇ ತಿಂಗಳ ರಾಜಿಮಾಡಿಕೊಳ್ಳುವ ಶುಲ್ಕ | ಆದೇಶ ಸಂಖ್ಯೆ. ದಿನಾಂಕ:<br>ಚಲನ್/ ರಶೀದಿ ಸಂಖ್ಯೆ. |
| (27) | ಪಾಲನೆಯಾಗದಿರುವುದಕ್ಕಾಗಿ ವಿಧಿಸಲಾದ ಎರಡನೆ ತಿಂಗಳ ರಾಜಿಮಾಡಿಕೊಳ್ಳುವ ಶುಲ್ಕ | ಆದೇಶ ಸಂಖ್ಯೆ. ದಿನಾಂಕ:<br>ಚಲನ್/ ರಶೀದಿ ಸಂಖ್ಯೆ. |
| (28) | ಪಾಲನೆಯಾಗದಿರುವುದಕ್ಕಾಗಿ ಸಮಿತಿಯಿಂದ ಕಾರಣಕೇಳುವ ನೋಟೀಸ್ | ಸಂಖ್ಯೆ:<br>ದಿನಾಂಕ: |
| (29) | ಸೀಲ್ ಮಾಡುವುದಕ್ಕಾಗಿ ಆದೇಶ | ಆದೇಶ ಸಂಖ್ಯೆ.<br>ದಿನಾಂಕ: |
| (30) | ಸೀಲ್ ಮಾಡಿದ ತರುವಾಯ ಲೈಸನ್ಸ್‌ಪ್ರಾಧಿಕಾರಕ್ಕೆ ವರದಿ | |
| (31) | ಲೈಸನ್ಸ್‌ಪ್ರಾಧಿಕಾರದಿಂದ ಪೂರ್ವಸ್ಥಿತಿಗೆ ತರುವ ಆದೇಶ | |

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**

// ಆದೇಶಾನುಸಾರ :: ರವಾನಿಸಲಾಗಿದೆ//

ಶಾಖಾಧಿಕಾರಿ

**ನಮೂನೆ ಸಂಖ್ಯೆ. 3**

**(6ನೇ ನಿಯಮದ (2)ನೇ ಉಪ–ನಿಯಮವನ್ನು ನೋಡಿ)**

**ಪರಿಶೀಲನಾ ವರದಿ**

**(ತ್ರಿಪ್ರತಿಯಲ್ಲಿ ಸಿದ್ದಪಡಿಸಬೇಕು)**

| | |
|---|---|
| ಕಾರ್ಯಸಂಸ್ಥೆಯ ಸಂಕೇತ: | |

ಪರಿಶೀಲನಾಧಿಕಾರಿಯ ಹೆಸರು:

ಪರಿಶೀಲನಾ ದಿನಾಂಕ: . . . .   . . . . .   . . . .

ಅಂತಿಮ ಪರಿಶೀಲನೆಯ ದಿನಾಂಕ:

| | | |
|---|---|---|
| (1) | ಕಾರ್ಯ ಸಂಸ್ಥೆಯ ಹೆಸರು | |
| (2) | ಪೂರ್ಣ ವಿಳಾಸದೊಂದಿಗೆ ಸ್ಥಿರ ದೂರವಾಣಿ, ಮೊಬೈಲ್ ಸಂಖ್ಯೆ, ಇ–ಮೇಲ್ ಐಡಿ | |
| (3) | ಸಮೀಪದ ಎಲ್ಲೆ ಗುರುತು | |
| (4) | ಪರಿಶೀಲನೆಯ ಸಮಯದಲ್ಲಿ ಪ್ರಸ್ತುತ ಮಾಲೀಕ/ ವ್ಯವಸ್ಥಾಪಕ/ ವ್ಯಕ್ತಿ/ ವ್ಯಕ್ತಿಗಳು/ ಸಂಘದ ಹೆಸರು ಮತ್ತು ವಿಳಾಸ, ಮೊಬೈಲ್ ಸಂಖ್ಯೆಯೊಂದಿಗೆ | |
| (5) | ಕಾರ್ಯಸಂಸ್ಥೆಯ ಮಾದರಿ | |
| (6) | ಪೌರಸಭೆಯ ಲೈಸನ್ಸ್ ಸಂಖ್ಯೆ ಅಥವಾ ಯಾವುದೇ ಇತರೆ ಲೈಸನ್ಸ್ ಸಂಖ್ಯೆ | ಲೈಸನ್ಸ್ಸಂಖ್ಯೆ ಸಿಂಧುವಾಗಿರುವವರೆಗೆ |
| (7) | ನವೀಕರಣದ ಲೈಸನ್ಸ್ | ಲೈಸನ್ಸ್ಸಂಖ್ಯೆ ಸಿಂಧುವಾಗಿರುವವರೆಗೆ |
| (8) | ಕಾರ್ಯಸಂಸ್ಥೆಯ ಮಾಲೀಕ/ ವ್ಯವಸ್ಥಾಪಕ/ ವ್ಯಕ್ತಿ | ಕೊನೆಯ ವಿವರಪಟ್ಟಿಕೆಯನ್ನು |

| | | |
|---|---|---|
| | ಅಥವಾ ವ್ಯಕ್ತಿಗಳು/ ಸಂಘದ ಮೂಲಕ ನಿಯತಕಾಲಿಕ ವಿವರಪಟ್ಟಿಕೆಯನ್ನು ಸಲ್ಲಿಸಲಾಗಿದೆಯೇ? | ಸಲ್ಲಿಸಿದ ದಿನಾಂಕ: |
| (9) | ಗಮ್ಯಯಂತ್ರೋಪಕರಣಗಳ ಮಾದರಿಗಳು | (1) ಡಿಎಫ್ಎಂಡಿ<br>(2) ಎಚ್ಎಚ್ಎಂಡಿ<br>(3) ವಾಹನದ ತಳಭಾಗವನ್ನು ಹುಡುಕುವ ಕನ್ನಡಿ<br>(ಅಗತ್ಯಪಡಿಸಿದಂತೆ)<br>(4) ಬ್ಯಾಗೇಜ್ ಸ್ಕ್ಯಾನರ್<br>(ಅಗತ್ಯಪಡಿಸಿದಂತೆ)<br>(5) ಸ್ನಿಪರ್‌ಡಾಗ್ (ಮೂಸು ನಾಯಿ)<br>(ಅಗತ್ಯಪಡಿಸಿದಂತೆ) |
| (10) | ನಿಗಾವಣೆಯ ಯಂತ್ರೋಪಕರಣಗಳು | ಸಿಸಿಟಿವಿ<br>(1) ಅಳವಡಿಸಲಾದ ಕ್ಯಾಮರಗಳ ಸಂಖ್ಯೆ<br>(2) ಕ್ಯಾಮರಗಳ ಮಾದರಿ<br>(3) ಸಂಗ್ರಹಣಾ ಸಾಮರ್ಥ್ಯ<br>(4) ಪ್ರತಿಯೊಂದು ಕ್ಯಾಮರದ ಫಿಕ್ಸೆಲ್‌ಗಳು |
| (11) | ದತ್ತಾಂಶವನ್ನು ವರ್ಗಾಯಿಸುವುದಕ್ಕಾಗಿ ಉಪಬಂಧವು ಲಭ್ಯವಿದೆಯೇ ಅಥವಾ ಇಲ್ಲವೇ | |
| (12) | ಅಳವಡಿಸಲಾದ ಗಮ್ಯ ನಿಯಂತ್ರಕ | (1) ಅವುಗಳೆಲ್ಲವು ಸುಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿವೆಯೇ?<br>(2) ತಪಾಸಣೆ ಮಾಡಲು ಯುಕ್ತವಾಗಿ ಒಪ್ಪಿಕೊಳ್ಳಲಾಗಿದೆಯೇ/ ಇಲ್ಲವೇ? |

| | | |
|---|---|---|
| | | (3) ಯಾವುದೇ ಆಕಸ್ಮಿಕ ಸೂಚನೆಯನ್ನು ಕೊಡಲಾಯಿತೇ? |
| (13) | ನಿಗಾವಣೆ ನಿಯಂತ್ರಕಗಳ ಅಳವಡಿಸುವಿಕೆ | (1) ಅದು ಸುಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿದೆಯೇ?<br>(2) ಅದು ಎಲ್ಲಾ ದಿನಗಳು ನಿರಂತರವಾಗಿ 24 ಗಂಟೆಗಳ ಕಾರ್ಯನಿರ್ವಹಿಸುತ್ತಿದೆಯೇ?<br>(3) ಅದು 50 ಯಾರ್ಡ್‌ಗಳ ದೂರದವರೆಗಿನ ಪ್ರವೇಶಿಸುವ ಮತ್ತು ನಿರ್ಗಮಿಸುವ ಪ್ರದೇಶಕ್ಕೆ ಹತ್ತಿರವಿರುವ ಪ್ರದೇಶಗಳನ್ನು ವ್ಯಾಪಿಸಿರುತ್ತದೆಯೇ?<br>(4) ಪ್ರತಿಬಿಂಬದ ಗುಣಮಟ್ಟ<br>(5) 30 ದಿನಗಳಿಗೆ ದತ್ತಾಂಶ ಸಂಗ್ರಹವನ್ನು ಶೇಖರಿಸಲಾಗಿದೆಯೇ ಅಥವಾ ಇಲ್ಲವೆ. |
| (14) | ಭದ್ರತಾ ಯಂತ್ರೋಪಕರಣಗಳ ನಿರ್ವಹಣೆಯು ತೃಪ್ತಿಕರವಾಗಿದೆಯೇ | |
| (15) | ಯಾವುದೇ ಒಂದು ಪ್ರಮುಖ ಸೂಚನೆಯನ್ನು ಆದಷ್ಟು ಬೇಗನೆ ಪೋಲೀಸ್‌ರವರಿಗೆ ತಿಳಿಸುವುದು ಮತ್ತು ಅಂಥ ಪರಿಸ್ಥಿತಿಯನ್ನು ನಿಭಾಯಿಸಲು ಸುಧಾರಣೆಗಳನ್ನು ಮಾಡುವುದು. | |
| (16) | ಯಾವುದೇ ಸಂಶಯಾತ್ಮಕ ಸೂಚನೆಯನ್ನು ತಿಳಿಸುವುದು ಮತ್ತು ಪರಿಹಾರತ್ಮಕ ಕ್ರಮಗಳನ್ನು ಕೈಗೊಳ್ಳುವುದು. | |
| (17) | ಪರಿಶೀಲನಾಧಿಕಾರಿಯ ಸುಧಾರಣೆ/ ಷರಾಗಳಿಗಾಗಿ ಸಲಹೆಗಳು | |

ಕಾರ್ಯಸಂಸ್ಥೆಯ ಮಾಲೀಕ/ ವ್ಯವಸ್ಥಾಪಕ/ ವ್ಯಕ್ತಿ/ ವ್ಯಕ್ತಿಗಳ/ ಸಂಘದ ಸಹಿ.

ತಾಂತ್ರಿಕರ ಸಹಿ

ಪರಿಶೀಲನಾಧಿಕಾರಿಯ ಸಹಿ

(ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ)

1. ಸಹಾಯಕ ಪೊಲೀಸ್ ಆಯುಕ್ತರು/ ಉಪ–ವಿಭಾಗೀಯ ಪೊಲೀಸ್ ಅಧಿಕಾರಿಯವರಿಗೆ ಒಂದು ಪ್ರತಿಯನ್ನು, ಕಾರ್ಯಸಂಸ್ಥೆಯ ಮಾಲೀಕ/ ವ್ಯವಸ್ಥಾಪಕ/ ವ್ಯಕ್ತಿ ಅಥವಾ ವ್ಯಕ್ತಿಗಳು/ ಸಂಘಗಳಿಗೆ ಒಂದು ಪ್ರತಿಯನ್ನು ಕಳುಹಿಸಬೇಕು.
2. ಒಂದು ಪ್ರತಿಯು ಕಚೇರಿ ಪ್ರತಿಯಾಗಿರಬೇಕು.

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**

// ಆದೇಶಾನುಸಾರ :: ರವಾನಿಸಲಾಗಿದೆ//

ಶಾಖಾಧಿಕಾರಿ

**ನಮೂನೆ ಸಂಖ್ಯೆ. 4**

(6ನೇ ನಿಯಮದ (2)ನೇ ಉಪ–ನಿಯಮವನ್ನು ನೋಡಿ)

ಕರ್ನಾಟಕ ಸರ್ಕಾರ (ಪೊಲೀಸ್ ಇಲಾಖೆ)

ಸಹಾಯಕ ಪೊಲೀಸ್ ಆಯುಕ್ತರು/ ಉಪ–ವಿಭಾಗೀಯ ಪೊಲೀಸ್ ಅಧಿಕಾರಿಯವರ ವರದಿಯ ನಮೂನೆ

ಪೊಲೀಸ್ ನಿರೀಕ್ಷಕರ ಕಛೇರಿ
ಪೊಲೀಸ್ ಠಾಣೆ/ ವೃತ್ತ
. . . . .. . . . . . . .

ಸಂಖ್ಯೆ
. . .. . .. . . .
ದಿನಾಂಕ:

ಇವರಿಗೆ
ಸಹಾಯಕ ಪೊಲೀಸ್ ಆಯುಕ್ತರು/ ಉಪ–ವಿಭಾಗೀಯ
ಪೊಲೀಸ್ ಅಧಿಕಾರಿ . . . . . . . . . . . ವಿಭಾಗ

ಮಾನ್ಯರೆ,

ವಿಷಯ: ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ,
2017–ಕಾರ್ಯಸಂಸ್ಥೆಯ ಪರಿಶೀಲನಾ ವರದಿಯನ್ನು ಸಲ್ಲಿಸುವ–ಬಗ್ಗೆ.

* * *

ನಾನು ಶ್ರೀ/ಶ್ರೀಮತಿ . . . . . . . . . . ಎಂಬುವರ (ಕಾರ್ಯಸಂಸ್ಥೆಯ ಸಂಕೇತ ಸಂಖ್ಯೆ) . . . . . . . . . ಪರಿಶೀಲನೆ ಮಾಡುವುದರೊಂದಿಗೆ . . . . . . . . . . ರಂದು ನಾನು ಕಾರ್ಯಸಂಸ್ಥೆಯ ಮಾಲೀಕ/ ವ್ಯವಸ್ಥಾಪಕ/ ವ್ಯಕ್ತಿ/ ವ್ಯಕ್ತಿಗಳು/ ಸಂಘಗಳಿಂದ ಈ ಮುಂದಿನ ಉಲ್ಲಂಘನೆ ಮಾಡಿರುವುದನ್ನು ನಾನು ಗಮನಿಸಿದ್ದೇನೆ.

| | |
|---|---|
| (1) | |
| (2) | |
| (3) | |

| (4) | |
|---|---|

2. ಆದ್ದರಿಂದ, ಕಾರ್ಯಸಂಸ್ಥೆಯ ಮಾಲೀಕ/ ವ್ಯವಸ್ಥಾಪಕ/ ವ್ಯಕ್ತಿ ಅಥವಾ ವ್ಯಕ್ತಿಗಳು/ ಸಂಘವಾಗಿದೆ ಎಂಬ ಸಂಗತಿಯಿದ್ದರೂ, ಅವರು, ಮೇಲ್ಕಂಡ ಸುರಕ್ಷತಾ ಕ್ರಮಗಳನ್ನು ನಿರ್ವಹಿಸಿರುವುದಾಗಿ ಭಾವಿಸಲಾಗಿದ್ದರೂ, ಮೇಲ್ಕಂಡ ಅಧಿನಿಯಮದ 3ನೇ ಪ್ರಕರಣವನ್ನು ಉಲ್ಲಂಘಿಸಿದ್ದಾರೆ. ಹಾಗಾಗಿ, ಭದ್ರತೆಗೆ ಪಾಲನೆ ಮಾಡದಿರುವಂಥ ಕಾರ್ಯಸಂಸ್ಥೆಯ ಮಾಲೀಕ/ ವ್ಯವಸ್ಥಾಪಕ/ ವ್ಯಕ್ತಿ ಅಥವಾ ವ್ಯಕ್ತಿಗಳು/ ಸಂಘದ ವಿರುದ್ಧ ಈ ಅಧಿನಿಯಮದ ಸುಸಂಬದ್ಧ ಉಪಬಂಧಗಳ ಅಡಿಯಲ್ಲಿ ಅಗತ್ಯ ಕ್ರಮವನ್ನು ತೆಗೆದುಕೊಳ್ಳತಕ್ಕದೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಪರಿಶೀಲನೆಯ ವರದಿಯ ಪ್ರತಿಯನ್ನು ಅವರ ಪರವಾಗಿ ಪರಿಶೀಲನೆ ಮಾಡಿ ಲಗತ್ತಿಸಲಾಗಿದೆ.

ತಮ್ಮ ವಿಶ್ವಾಸಿ,

ಪೊಲೀಸ್ ನಿರೀಕ್ಷಕರು,
(ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ)

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**

// ಆದೇಶಾನುಸಾರ :: ರವಾನಿಸಲಾಗಿದೆ//

ಶಾಖಾಧಿಕಾರಿ

**ನಮೂನೆ ಸಂಖ್ಯೆ. 5**

(7ನೇ ನಿಯಮದ (1)ನೇ ಉಪ–ನಿಯಮವನ್ನು ನೋಡಿ)

ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2016–ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ನಿಯಮಗಳು, 2018ರ ಅಡಿಯಲ್ಲಿ ಕಾರಣ ಕೇಳುವ ನೋಟೀಸ್‌ನ ನಮೂನೆ

**ಕರ್ನಾಟಕ ಸರ್ಕಾರ (ಪೊಲೀಸ್ ಇಲಾಖೆ)**

ಸಹಾಯಕ ಪೊಲೀಸ್ ಆಯುಕ್ತರು/
ಉಪ–ವಿಭಾಗೀಯ ಪೊಲೀಸ್ ಅಧಿಕಾರಿಯವರ ಕಛೇರಿ
. . . . . . . . . . . ವಿಭಾಗ
ದಿನಾಂಕ:

ಸಂಖ್ಯೆ

ಇವರಿಗೆ

. . . . . . . ಕಾರ್ಯಸಂಸ್ಥೆಯ ಮಾಲೀಕ/ ವ್ಯವಸ್ಥಾಪಕ/
ವ್ಯಕ್ತಿ ಅಥವಾ ವ್ಯಕ್ತಿಗಳ/ ಸಂಘದ ಹೆಸರು

ಮಾನ್ಯರೆ,

ವಿಷಯ: ನಿಯಮಗಳನ್ನು ಪಾಲನೆ ಮಾಡದಿರುವುದಕ್ಕಾಗಿ ಸಂಬಂಧಪಟ್ಟಂತೆ ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017ರ 6(1)ನೇ ಪ್ರಕರಣದ ಅಡಿಯಲ್ಲಿ ಕಾರಣ ಕೇಳುವ ನೋಟೀಸು

* * *

ನಿಮ್ಮ ಕಾರ್ಯಸಂಸ್ಥೆಯನ್ನು, ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017ರ ಅಡಿಯಲ್ಲಿ ಕಾರ್ಯಸಂಸ್ಥೆಯಂತೆ ಗುರುತಿಸಲಾಗಿರುವುದರಿಂದ;

2. ನೀವು ಸದರಿ ಅಧಿನಿಯಮದಲ್ಲಿ ನಮೂದಿಸಿರುವಂತೆ ಸುರಕ್ಷತೆ ಮತ್ತು ಭದ್ರತೆಯ ಯಂತ್ರೋಪಕರಣಗಳನ್ನು ಅಳವಡಿಸುವುದು ನಿಮ್ಮ ಕರ್ತವ್ಯವಾಗಿರುವುದರಿಂದ;

3. ಆದ್ದರಿಂದ, .................. ರಂದು ನಿಮ್ಮ ಕಾರ್ಯಸಂಸ್ಥೆಯನ್ನು ............................... ಪೊಲೀಸ್ ಇನ್ಸ್‌ಪೆಕ್ಟರ್‌ರವರು ಪರಿಶೀಲಿಸಿದ್ದಾರೆ ಮತ್ತು ಈ ಮುಂದಿನ ಉಲ್ಲಂಘನೆಗಳು ರುಜುವಾತಾಗಿವೆ.

| | |
|---|---|
| (1) | |
| (2) | |
| (3) | |
| (4) | |

4. ಮೇಲಿನ ನಿಯಮಗಳ ಮೇರೆಗೆ ಅಧಿಸೂಚಿಸಲಾದ ಮಾಲೀಕ/ ವ್ಯವಸ್ಥಾಪಕ/ ವ್ಯಕ್ತಿ ಅಥವಾ ವ್ಯಕ್ತಿಗಳು/ ಸಂಘದಂತೆ, ನೀವು, ಭದ್ರತೆ ಮತ್ತು ಸುರಕ್ಷತಾ ಕ್ರಮಗಳನ್ನು ನಿರ್ವಹಿಸಿದ್ದಾರೆಂಬ ಸಂಗತಿಯಿದ್ದರೂ, ಆದರೆ ನೀವು ಮೇಲಿನ ಅಧಿನಿಯಮದ 3ನೇ ಪ್ರಕರಣವನ್ನು ಉಲ್ಲಂಘಿಸಿರುವಂತೆ ಕಂಡು ಬಂದಿದೆ.

5. ಈ ಅಧಿನಿಯಮ/ ನಿಯಮಗಳ 6(1)ನೇ ಪ್ರಕರಣದ ಮೇರೆಗೆ ನನ್ನ ಮೇಲೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವುದರಿಂದ, ಮೇಲಿನ ಅಧಿನಿಯಮ/ ನಿಯಮಗಳ ಅಡಿಯಲ್ಲಿ ಕಾರಣ ಕೇಳುವ ನೋಟೀಸು ನೀಡಿದ್ದು, ಪಾಲನೆ ಮಾಡದಿರುವುದಕ್ಕಾಗಿ ನಿಮ್ಮ ವಿರುದ್ಧ ಏಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬಾರದು. ನಿಮ್ಮ ಪಾಲನಾ ವರದಿಯು ಈ ಕಛೇರಿಗೆ (15 ದಿನಗಳೊಳಗಾಗಿ) ತಲುಪತಕ್ಕದ್ದು. ಇಲ್ಲದಿದ್ದಲ್ಲಿ, ಸದರಿ ಅಧಿನಿಯಮ/ ನಿಯಮಗಳ ಅಡಿಯಲ್ಲಿ ಸೂಕ್ತ ಕ್ರಮವನ್ನು ಕೈಗೊಳ್ಳತಕ್ಕದ್ದು.

ನೋಟೀಸ್‌ನ ರಶೀದಿಯ ಸ್ವೀಕೃತಿ

-------------

ಸಹಾಯಕ ಪೊಲೀಸ್ ಆಯುಕ್ತರು/

ಉಪ-ವಿಭಾಗೀಯ ಪೊಲೀಸ್ ಅಧಿಕಾರಿ
(ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ)

. . . . . . . . ಪೊಲೀಸ್ ನಿರೀಕ್ಷಕರಿಗೆ ಪ್ರತಿಯನ್ನು ಆತನು ಮಾಲೀಕ/ ವ್ಯವಸ್ಥಾಪಕ/ ವ್ಯಕ್ತಿ ಅಥವಾ ವ್ಯಕ್ತಿಗಳು/ ಸಂಘಗಳಿಗೆ ಮೂಲ ಪ್ರತಿಯನ್ನು ನೀಡುವುದು ಮತ್ತು ಈ ಕಛೇರಿಗೆ ಸ್ವೀಕೃತಿ ಪ್ರತಿಯನ್ನು ಕಳುಹಿಸಲಾಗುವುದು.

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**

// ಆದೇಶಾನುಸಾರ :: ರವಾನಿಸಲಾಗಿದೆ//

ಶಾಖಾಧಿಕಾರಿ

**ನಮೂನೆ ಸಂಖ್ಯೆ. 6**

(7ನೇ ನಿಯಮದ (3)ನೇ ಉಪ–ನಿಯಮವನ್ನು ನೋಡಿ)

ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017–ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ನಿಯಮಗಳು, 2018ರ ಮೇರೆಗೆ ಕಾರಣ ಕೇಳುವ ನೋಟೀಸು/ ರಾಜಿಮಾಡಿಕೊಳ್ಳುವ ಶುಲ್ಕದ ರಿಜಿಸ್ಟರ್.

**(ಸಹಾಯಕ ಪೊಲೀಸ್ ಆಯುಕ್ತರು/ ಉಪ–ವಿಭಾಗೀಯ ಪೊಲೀಸ್ ಅಧಿಕಾರಿಯು ನಿರ್ವಹಿಸಬೇಕಾದುದು)**

| | |
|---|---|
| ಕಾರ್ಯಸಂಸ್ಥೆಯ ಸಂಕೇತ: | |

| | | |
|---|---|---|
| (1) | ಕಾರ್ಯ ಸಂಸ್ಥೆಯ ಹೆಸರು | |
| (2) | ಪೂರ್ಣ ವಿಳಾಸದೊಂದಿಗೆ ಸ್ಥಿರದೂರವಾಣಿ, ಮೊಬೈಲ್ ಸಂಖ್ಯೆ, ಇ–ಮೇಲ್ ಐಡಿ | |
| (3) | ಹತ್ತಿರದ ಎಲ್ಲೆ ಗುರುತು | |
| (4) | ಮೊಬೈಲ್ ಸಂಖ್ಯೆಯೊಂದಿಗೆ, ಮಾಲೀಕನ ಹೆಸರು ಮತ್ತು ವಿಳಾಸ. | |
| (5) | ಮೊಬೈಲ್ ಸಂಖ್ಯೆಯೊಂದಿಗೆ ವ್ಯವಸ್ಥಾಪಕರ ಹೆಸರು ಮತ್ತು ವಿಳಾಸ. | |
| (6) | ಕಾರ್ಯಸಂಸ್ಥೆಯ ವಿಧ | |
| (7) | ಅಧಿಕಾರವ್ಯಾಪ್ತಿಯ ಪೊಲೀಸ್ ಠಾಣೆ | |
| (8) | (i) ಪರಿಶೀಲಿಸಲಾದ ಕಾರ್ಯಸಂಸ್ಥೆ | |
| | (ii) ಪರಿಶೀಲನೆ ದಿನಾಂಕ | |
| | (iii) ನೋಟೀಸಿನ ಉಲ್ಲಂಘನೆಗಳು | |
| (9) | (1) ಹೊರಡಿಸಲಾದ ಕಾರಣ ಕೇಳುವ ನೋಟೀಸು | |
| | (2) ಜಾರಿಮಾಡಲಾದ ಕಾರಣ ಕೇಳುವ ನೋಟೀಸು | |
| | (3) ಪಾಲಿಸಲಾಗಿದೆಯೇ ಅಥವಾ ಇಲ್ಲವೇ | |
| (10) | ವಸೂಲು ಮಾಡಲಾದ ಮೊದಲ ತಿಂಗಳ ರಾಜಿಮಾಡಿಕೊಳ್ಳುವ ಶುಲ್ಕ | ಆದೇಶ ಸಂಖ್ಯೆ. ದಿನಾಂಕ:<br>ಚಲನ್‌ನ ಸ್ವೀಕೃತಿ ಸಂಖ್ಯೆ.<br>ದಿನಾಂಕ: |

| | | |
|---|---|---|
| (11) | ವಸೂಲು ಮಾಡಲಾದ ಎರಡನೇ ತಿಂಗಳ ರಾಜಿಮಾಡಿಕೊಳ್ಳುವ ಶುಲ್ಕ | ಆದೇಶ ಸಂಖ್ಯೆ. ದಿನಾಂಕ: ಚಲನ್‌ನ ಸ್ವೀಕೃತಿ ಸಂಖ್ಯೆ. ದಿನಾಂಕ: |
| (12) | ಸೀಲ್ ಮಾಡಿದ ಕಾರ್ಯಸಂಸ್ಥೆಗಾಗಿ ನೋಟೀಸು | |
| (13) | ಸೀಲ್ ಮಾಡಿರುವ ಅಂತಿಮ ಆದೇಶ | |
| (14) | ಕಾರ್ಯಸಂಸ್ಥೆಯನ್ನು ಸೀಲ್ ಮಾಡುವುದು | |
| (15) | ಕಾರ್ಯಸಂಸ್ಥೆಯ ಪೂರ್ವಸ್ಥಿತಿ ಸ್ಥಾಪನೆ | |

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**

// ಆದೇಶಾನುಸಾರ :: ರವಾನಿಸಲಾಗಿದೆ//

ಶಾಖಾಧಿಕಾರಿ

**ನಮೂನೆ ಸಂಖ್ಯೆ. 7**

(7ನೇ ನಿಯಮದ (2)(ಎ) ಉಪ–ನಿಯಮವನ್ನು ನೋಡಿ)

ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017–ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ನಿಯಮಗಳು, 2018ರ ಮೇರೆಗೆ ವಿಧಿಸಲಾಗುವ ಮೊದಲ ತಿಂಗಳ ರಾಜಿ ಮಾಡಿಕೊಳ್ಳುವ ಶುಲ್ಕದ ಕ್ರಮ ವ್ಯವಸ್ಥೆ.

**ಕರ್ನಾಟಕ ಸರ್ಕಾರ**

**(ಪೊಲೀಸ್ ಇಲಾಖೆ)**

ಸಹಾಯಕ ಪೊಲೀಸ್ ಆಯುಕ್ತರ ಕಛೇರಿ/
ಉಪ–ವಿಭಾಗೀಯ ಪೊಲೀಸ್ ಅಧಿಕಾರಿ
. . . . . . . . . . . . . . ವಿಭಾಗ

**ಸಂಖ್ಯೆ.** **ದಿನಾಂಕ:**

**ಇವರಿಗೆ,**
ಮಾಲೀಕ/ ವ್ಯವಸ್ಥಾಪಕ/ ವ್ಯಕ್ತಿ ಅಥವಾ ವ್ಯಕ್ತಿಗಳು/
ಸಂಘ. . .. .. . ಕಾರ್ಯಸಂಸ್ಥೆಯ ಹೆಸರು.

ಮಾನ್ಯರೆ,

**ವಿಷಯ**: ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017– ಕಾರ್ಯಸಂಸ್ಥೆಯ ಪರಿಶೀಲನೆ–ಅಧಿನಿಯಮ/ ನಿಯಮಗಳನ್ನು ಪಾಲಿಸದಿರುವುದು– ವಿಧಿಸಲಾಗುವ ಮೊದಲ ತಿಂಗಳ ರಾಜಿಮಾಡಿಕೊಳ್ಳುವ ಶುಲ್ಕದ ಬಗ್ಗೆ ಹೊರಡಿಸಲಾದ ಆದೇಶಗಳು.

**ಉಲ್ಲೇಖ**:– 1. ಕಾರಣ ಕೇಳುವ ನೋಟೀಸ್ ಸಂಖ್ಯೆ. . . . . . . .
ದಿನಾಂಕ:. . . . . .

2. ಕಾರಣ ಕೇಳುವ ನೋಟೀಸಿನ ಸ್ವೀಕೃತಿ ದಿನಾಂಕ:. . . . . . . . . .

* * *

ನಿಮ್ಮ ಕಾರ್ಯಸಂಸ್ಥೆಯನ್ನು ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017ರ ಅಡಿಯಲ್ಲಿ ಕಾರ್ಯಸಂಸ್ಥೆಯಂತೆ ಗುರುತಿಸಲಾಗಿರುವುದರಿಂದ;

2. ನೀವು, ಸದರಿ ಅಧಿನಿಯಮದಲ್ಲಿ ಪರಿಗಣಿಸಲಾದಂತೆ ಸುರಕ್ಷತೆ ಮತ್ತು ಭದ್ರತೆಯ ಸಾಧನ ಸಾಮಗ್ರಿಗಳನ್ನುಇರಿಸುವುದಕ್ಕೆ ಕರ್ತವ್ಯಬದ್ಧರಾಗಿರುವುದರಿಂದ;

3. ಆದ್ದರಿಂದ, ಪೊಲೀಸ್ ಇನ್ಸ್‌ಪೆಕ್ಟರ್‌ರವರು . . . . . . . . . ರಂದು ಕಾರ್ಯಸಂಸ್ಥೆಯನ್ನು ಪರಿಶೀಲಿಸಿದ್ದಾರೆ ಮತ್ತು ಈ ಮುಂದಿನ ಉಲ್ಲಂಘನೆಗಳು ರುಜುವಾತಾಗಿವೆ.

| | |
|---|---|
| (1) | |
| (2) | |
| (3) | |
| (4) | |

4. ನೀವು, ಕಾರಣ ಕೇಳುವ ನೋಟೀಸ್ ನೀಡಲಾಗಿದ್ದರೂ ಮತ್ತು ಹಾಗಿದ್ದರೂ, ನೀವು ಅದನ್ನು ಪಾಲಿಸದಿರುವುದರಿಂದ;

5. ಆದ್ದರಿಂದ, ಮೇಲಿನ ಅಧಿನಿಯಮ/ ನಿಯಮಗಳ 8(ii)ನೇ ನಿಯಮದೊಂದಿಗೆ ಓದಲಾದ 6(2)(i)ನೇ ಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೇಲಿನ ಅಧಿನಿಯಮ/ ನಿಯಮಗಳನ್ನು ಪಾಲಿಸದಿರುವುದಕ್ಕಾಗಿ ಮೊದಲನೇ ತಿಂಗಳು ರೂ. 5,000/– (ಐದು ಸಾವಿರ ರೂಪಾಯಿಗಳು ಮಾತ್ರ) ರಾಜಿಮಾಡಿಕೊಳ್ಳುವ ಶುಲ್ಕವನ್ನು ಈ ಮೂಲಕ ವಿಧಿಸಲಾಗಿದೆ. ನೀವು ರಾಜಿಮಾಡಿಕೊಳ್ಳುವ ಶುಲ್ಕವನ್ನು ಕೂಡಲೇ ಸಂದಾಯಮಾಡತಕ್ಕದ್ದು ಮತ್ತು ಈ ಕಛೇರಿಗೆ ಚಲನ್‌ನ್ನು ಸಲ್ಲಿಸುವುದು.

ಸಹಾಯಕ ಪೊಲೀಸ್ ಆಯುಕ್ತರು/
ಉಪ–ವಿಭಾಗೀಯ ಪೊಲೀಸ್ ಅಧಿಕಾರಿ
(ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ)

ಪ್ರತಿಗಳು– ಪೊಲೀಸ್ ಇನ್ಸ್‌ಪೆಕ್ಟರ್. . . . . . ಇವರಿಗೆ

: ಆತನು ಮಾಲೀಕ/ ವ್ಯವಸ್ಥಾಪಕ, ವ್ಯಕ್ತಿ ಅಥವಾ ವ್ಯಕ್ತಿಗಳ/ ಸಂಘದ ಮೂಲ ಮಾಲೀಕನಿಗೆ ಜಾರಿಮಾಡುವುದು ಮತ್ತು ಈ ಕಛೇರಿಗೆ ಸ್ವೀಕೃತಿಯ ಪ್ರತಿ ಮತ್ತು ರಾಜಿಮಾಡಿಕೊಳ್ಳುವ ಶುಲ್ಕವನ್ನು ಸಂದಾಯ ಮಾಡಿರುವುದಕ್ಕಾಗಿ ಚಲನ್‌ನ್ನು ಸಹ ಕಳುಹಿಸುವುದು.

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**

// ಆದೇಶಾನುಸಾರ :: ರವಾನಿಸಲಾಗಿದೆ//

ಶಾಖಾಧಿಕಾರಿ

**ನಮೂನೆ ಸಂಖ್ಯೆ. 8**

(7ನೇ ನಿಯಮದ (2)(ಬಿ) ಉಪ–ನಿಯಮವನ್ನು ನೋಡಿ)

ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017–ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ನಿಯಮಗಳು, 2018ರ ಮೇರೆಗೆ ಎರಡನೇ ತಿಂಗಳ ರಾಜಿ ಮಾಡಿಕೊಳ್ಳುವ ಶುಲ್ಕ ವಿಧಿಸುವುದಕ್ಕಾಗಿ

**ಕರ್ನಾಟಕ ಸರ್ಕಾರ**

**(ಪೊಲೀಸ್ ಇಲಾಖೆ)**

ಸಹಾಯಕ ಪೊಲೀಸ್ ಆಯುಕ್ತರ ಕಛೇರಿ/
ಉಪ–ವಿಭಾಗೀಯ ಪೊಲೀಸ್ ಅಧಿಕಾರಿ
. . . . . . . . . . . . . . ವಿಭಾಗ

**ಸಂಖ್ಯೆ.** **ದಿನಾಂಕ:**

**ಇವರಿಗೆ,**
ಮಾಲೀಕ/ ವ್ಯವಸ್ಥಾಪಕ/ ವ್ಯಕ್ತಿ ಅಥವಾ ವ್ಯಕ್ತಿಗಳು/
ಸಂಘ. . .. .. . ಕಾರ್ಯಸಂಸ್ಥೆಯ ಹೆಸರು.

**ಮಾನ್ಯರೆ,**

**ವಿಷಯ**: ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017–ಕಾರ್ಯಸಂಸ್ಥೆಯ ಪರಿಶೀಲನೆ–ಅಧಿನಿಯಮ/ ನಿಯಮಗಳನ್ನು ಪಾಲಿಸದಿರುವುದು–ಎರಡನೇ ರಾಜಿಮಾಡಿಕೊಳ್ಳುವ ಶುಲ್ಕವನ್ನು ವಿಧಿಸಲಾದ ಬಗ್ಗೆ ಹೊರಡಿಸಲಾದ ಆದೇಶಗಳು.

**ಉಲ್ಲೇಖ**: 1. ಕಾರಣ ಕೇಳುವ ನೋಟೀಸ್ ಸಂಖ್ಯೆ. . . . . . . .
ದಿನಾಂಕ:. . . . .
2. ಕಾರಣ ಕೇಳುವ ನೋಟೀಸಿನ ಸ್ವೀಕೃತಿ ದಿನಾಂಕ:. . . . . . . . . . .
**3**. ಮೊದಲ ರಾಜಿಮಾಡಿಕೊಳ್ಳುವ ಶುಲ್ಕದ ಆದೇಶದ
ದಿನಾಂಕ:. . .. . . .
**4**. ರಸೀದಿ ದಿನಾಂಕ: . . . . . . . . . . . . .. .

* * *

ನಿಮ್ಮ ಕಾರ್ಯಸಂಸ್ಥೆಯನ್ನು, ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017ರ ಅಡಿಯಲ್ಲಿ ಕಾರ್ಯಸಂಸ್ಥೆಯೆಂದು ಗುರುತಿಸಲಾಗಿರುವುದರಿಂದ;

2. ನೀವು, ಸದರಿ ಅಧಿನಿಯಮದಲ್ಲಿ ಪರಿಗಣಿಸಲಾದಂತೆ ಸುರಕ್ಷತೆ ಮತ್ತು ಭದ್ರತೆಯ ಸಾಧನ ಸಾಮಗ್ರಿಗಳನ್ನು ಇರಿಸುವುದಕ್ಕೆ ಕರ್ತವ್ಯಬದ್ಧರಾಗಿರುವುದರಿಂದಾಗಿ;

3. ಆದ್ದರಿಂದ, ................. ರಂದು ನಿಮ್ಮ ಕಾರ್ಯಸಂಸ್ಥೆಯನ್ನು .............................. ಪೊಲೀಸ್ ಇನ್ಸ್‌ಪೆಕ್ಟರ್‌ರವರು ಪರಿಶೀಲಿಸಿದ್ದಾರೆ ಮತ್ತು ಈ ಮುಂದಿನ ಉಲ್ಲಂಘನೆಗಳು ರುಜುವಾತಾಗಿವೆ.

| | |
|---|---|
| (1) | |
| (2) | |
| (3) | |
| (4) | |

4. ಆದ್ದರಿಂದ, ನೀವು, ಕಾರಣಕೇಳುವ ನೋಟೀಸ್ ನೀಡಿರುವುದರಿಂದ ಮತ್ತು ಹಾಗೇ ನೀಡಿದ್ದರೂ, ನೀವು ಅದನ್ನು ಪಾಲಿಸಿರುವುದಿಲ್ಲ. ಆ ಕಾರಣದಿಂದ, ನಿಮಗೆ 3ರಲ್ಲಿ ಹೇಳಲಾದ 5,000/– ರೂಪಾಯಿಗಳು ರಾಜಿಮಾಡಿಕೊಳ್ಳುವ ಶುಲ್ಕವನ್ನು ಸಹ ವಿಧಿಸಲಾಗಿದೆ ಮತ್ತು 4 ರಲ್ಲಿ ಹೇಳಲಾದ ಉಲ್ಲೇಖವನ್ನು ನೋಡಿ ಪಾವತಿಸಿದ್ದೀರಿ. ಹಾಗಿದ್ದರೂ, ನೀವು ಭದ್ರತಾ ಸಾಧನ ಸಾಮಗ್ರಿಗಳನ್ನು ಇರಿಸುವುದಕ್ಕೆ ವಿಫಲರಾಗಿದ್ದೀರಿ;

5. ಆದ್ದರಿಂದ, ಸದರಿ ನಿಯಮಗಳ 6(2)(ii)ನೇ ಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೇಲಿನ ನಿಯಮಗಳನ್ನು ಪಾಲಿಸದಿರುವುದಕ್ಕಾಗಿ ಎರಡನೇ ತಿಂಗಳಿನ ರೂ. 10,000/– (ಹತ್ತುಸಾವಿರ ರೂಪಾಯಿಗಳು ಮಾತ್ರ) ರಾಜಿಮಾಡಿಕೊಳ್ಳುವ ಶುಲ್ಕವನ್ನು ಈ ಮೂಲಕ ನಿಮಗೆ ವಿಧಿಸಲಾಗಿದೆ. ನೀವು ದಂಡವನ್ನು ಕೂಡಲೇ ಸಂದಾಯ ಮಾಡತಕ್ಕದ್ದು ಮತ್ತು ಈ ಕಛೇರಿಗೆ ಚಲನ್‌ನ್ನು ಕಳುಹಿಸುವುದು. ನೀವು ಇನ್ನು ಮುಂದೆಯೂ, ಎರಡು ತಿಂಗಳೊಳಗೆ ಈ ಅಧಿನಿಯಮ ಉಪಬಂಧಗಳನ್ನು ಪಾಲಿಸಲು ನಿಮಗೆ ನಿರ್ದೇಶಿಸಲಾಗಿದ್ದು, ನಿಮ್ಮ ಕಾರ್ಯಸಂಸ್ಥೆಯು ಪಾಲಿಸಲು ವಿಫಲವಾದಲ್ಲಿ, ಅಧಿನಿಯಮದ . . . .. . . ಉಪಬಂಧಗಳ ಮೇರೆಗೆ ಸೀಲ್ ಮಾಡುವುದು.

ಸಹಾಯಕ ಪೊಲೀಸ್ ಆಯುಕ್ತರು/
ಉಪ–ವಿಭಾಗೀಯ ಪೊಲೀಸ್ ಅಧಿಕಾರಿ
(ಈ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ)

ಪ್ರತಿಗಳು:ಇನ್ಸಪೆಕ್ಟರ್ ಪೊಲೀಸ್ . . . . . . ಇವರಿಗೆ:

ಆತನು, ಮಾಲೀಕ/ ವ್ಯವಸ್ಥಾಪಕ/ ವ್ಯಕ್ತಿ ಅಥವಾ ವ್ಯಕ್ತಿಗಳು/ ಸಂಘದ ಮೂಲ ಮಾಲೀಕನಿಗೆ ಪ್ರತಿಯನ್ನು ಜಾರಿಮಾಡುವುದು ಮತ್ತು ಈ ಕಛೇರಿಗೆ ಸ್ವೀಕೃತಿಯ ಪ್ರತಿ ಮತ್ತು ರಾಜಿಮಾಡಿಕೊಳ್ಳುವ ಶುಲ್ಕವನ್ನು ಸಂದಾಯ ಮಾಡಿರುವುದಕ್ಕಾಗಿ ಚಲನ್‌ನ್ನು ಸಹ ಕಳುಹಿಸುವುದು.

. . . . . . . . . . . ಲೈಸನ್ಸ್ ಪ್ರಾಧಿಕಾರಕ್ಕೆ ಪ್ರತಿಗಳು.

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**

// ಆದೇಶಾನುಸಾರ :: ರವಾನಿಸಲಾಗಿದೆ//

ಶಾಖಾಧಿಕಾರಿ

**ನಮೂನೆ ಸಂಖ್ಯೆ. 9**

(7ನೇ ನಿಯಮದ (4)ನೇಉಪ–ನಿಯಮವನ್ನು ನೋಡಿ)

ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2018–ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ನಿಯಮಗಳು, 2017ರ ಮೇರೆಗೆ ರಾಜಿಮಾಡಿಕೊಳ್ಳುವ ಶುಲ್ಕದ ರಸೀದಿ/ ಸ್ವೀಕೃತಿಯ ನಮೂನೆ

ಸ್ವೀಕೃತಿ ಸಂಖ್ಯೆ: – – – – – ದಿನಾಂಕ:

(ರಾಜಿಮಾಡಿಕೊಳ್ಳುವ ಶುಲ್ಕದ ರಸೀದಿ)

| | | |
|---|---|---|
| (1) | ಕಾರ್ಯಸಂಸ್ಥೆಯ/ ಸಂಸ್ಥೆ ಹೆಸರು | |
| (2) | ಕಾರ್ಯಸಂಸ್ಥೆ ಸಂಕೇತ | |
| (3) | ರಾಜಿಮಾಡಿಕೊಳ್ಳುವ ಶುಲ್ಕ | 1ನೇ ತಿಂಗಳ ರಾಜಿಮಾಡಿಕೊಳ್ಳುವ ಶುಲ್ಕ<br>2ನೇ ತಿಂಗಳ ರಾಜಿಮಾಡಿಕೊಳ್ಳುವ ಶುಲ್ಕ |
| (4) | ಆದೇಶ ಸಂಖ್ಯೆ ಮತ್ತು ದಿನಾಂಕ | |
| (5) | ಮೊತ್ತ | ರೂ.ಗಳು |
| (6) | ಮೊತ್ತ ಪದಗಳಲ್ಲಿ | (ರೂಪಾಯಿಗಳು. . . . . .) |
| (7) | ಬ್ಯಾಂಕ್ ಮತ್ತು ಶಾಖೆಯ ಹೆಸರು | |
| (8) | ಚಲನ್ ಸಂಖ್ಯೆ ಮತ್ತು ದಿನಾಂಕ | |

ಸ್ವೀಕರಿಸಿದವರ ಸಹಿ:

ಸಹಾಯಕ ಪೊಲೀಸ್ ಆಯುಕ್ತರು/
ಉಪ–ವಿಭಾಗೀಯ ಪೊಲೀಸ್ ಅಧಿಕಾರಿ
(ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ)

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**

// ಆದೇಶಾನುಸಾರ :: ರವಾನಿಸಲಾಗಿದೆ//

ಶಾಖಾಧಿಕಾರಿ

**ನಮೂನೆ ಸಂಖ್ಯೆ. 10**

(6ನೇ ನಿಯಮದ (4)ನೇ ಉಪ–ನಿಯಮ ಮತ್ತು 9ನೇ ನಿಯಮದ (02)ನೇ ಉಪ–ನಿಯಮವನ್ನು ನೋಡಿ)

ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017–ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ನಿಯಮಗಳು, 2018ರ 6(3)ನೇ ಪ್ರಕರಣದ ಅಡಿಯಲ್ಲಿ ಪಾಲಿಸದಿರುವುದಕ್ಕೆ ಸಂಬಂಧಪಟ್ಟಂತೆ, ಸಹಾಯಕ ಪೊಲೀಸ್ ಆಯುಕ್ತರು/ ಉಪ–ವಿಭಾಗೀಯ ಪೊಲೀಸ್ ಅಧಿಕಾರಿಗೆ ವರದಿಯ ಸ್ವರೂಪ

**ಕರ್ನಾಟಕ ಸರ್ಕಾರ**

**(ಪೊಲೀಸ್ ಇಲಾಖೆ)**

ಪೊಲೀಸ್ ಇನ್ಸ್‌ಪೆಕ್ಟರ್‌ರವರ ಕಛೇರಿ/
ಪೊಲೀಸ್ ಠಾಣೆ/ ವೃತ್ತ
. . . . . . . . . . . . . .

ಸಂಖ್ಯೆ. ದಿನಾಂಕ:

**ಇವರಿಗೆ,**
ಸಹಾಯಕ ಪೊಲೀಸ್ ಆಯುಕ್ತರು/ ಉಪ ವಿಭಾಗೀಯ
ಪೊಲೀಸ್ ಅಧಿಕಾರಿ, ____________ ವಿಭಾಗ.

**ಮಾನ್ಯರೆ,**

**ವಿಷಯ**: ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017–ಕಾರ್ಯಸಂಸ್ಥೆಯ ಪರಿಶೀಲನೆ–ಸಂಬಂಧಪಟ್ಟ ವರದಿಯನ್ನು ಸಲ್ಲಿಸುವ ಬಗ್ಗೆ.

**ಉಲ್ಲೇಖ**: 1. ಮೊದಲ ತಿಂಗಳ ರಾಜಿಮಾಡಿಕೊಳ್ಳುವ ಶುಲ್ಕದ ಆದೇಶದ ದಿನಾಂಕ:. . .. .
2. ಎರಡನೇ ತಿಂಗಳ ರಾಜಿಮಾಡಿಕೊಳ್ಳುವ ಶುಲ್ಕದ ಆದೇಶದ ದಿನಾಂಕ:. . . .

* * *

ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2016ರ ಅಗತ್ಯತೆಗಳನ್ನು ಪಾಲಿಸದಿರುವುದು ರುಜುವಾತಾಗಿರುವ ಬಗ್ಗೆ ಶ್ರೀ/ಶ್ರೀಮತಿ .......................................... (ಸಿಬ್ಬಂದಿ ಕೋಡ್ ಸಂಖ್ಯೆ) ರವರ ಮೇಲೆ ನಾನು ವರದಿ ಸಲ್ಲಿಸುತ್ತಿದ್ದೇನೆ. ಅಂಥ ವರದಿಗಳನ್ನು ಕಳುಹಿಸಲಾಗಿದೆ ಮತ್ತು ರಾಜಿಮಾಡಿಕೊಳ್ಳುವ ಶುಲ್ಕದ ಮೊದಲನೇ ಮತ್ತು ಎರಡನೇ ತಿಂಗಳಿಗೆ ಅನುಸಾರವಾಗಿ ಹೇಳಲಾದ 1ನೇ ಮತ್ತು 2ನೇ ಉಲ್ಲೇಖಗಳನ್ನು ನೋಡಿ ವಿಧಿಸಲಾಗಿದೆ. 2ನೇ ತಿಂಗಳ ರಾಜಿಮಾಡಿಕೊಳ್ಳುವ ಶುಲ್ಕದ

ದಿನಾಂಕದಿಂದ ಎರಡು ತಿಂಗಳು ಮುಕ್ತಾಯವಾಗಿದ್ದರೂ, ಕಾರ್ಯಸಂಸ್ಥೆ ಮಾಲೀಕ/ ವ್ಯವಸ್ಥಾಪಕ/ ವ್ಯಕ್ತಿ ಅಥವಾ ವ್ಯಕ್ತಿಗಳು/ ಸಂಘವು ಅಗತ್ಯತೆಗಳನ್ನು ಪಾಲಿಸಿರುವುದಿಲ್ಲ.

2. ಆದ್ದರಿಂದ, ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಾಗಿ ಸಂಸ್ಥೆಯನ್ನು ಸೀಲ್ ಮಾಡುವುದಕ್ಕಾಗಿ ಈ ಅಧಿನಿಯಮದಲ್ಲಿ ಹೇಳಲಾದಂತೆ ವ್ಯವಹರಣೆಗಳನ್ನು ಪ್ರಾರಂಭಿಸಲು ಕೋರಲಾಗಿದೆ.

ನಿಮ್ಮ ವಿಶ್ವಾಸಿ,

. . . . . . . . . . .

ಪೊಲೀಸ್ ಇನ್ಸ್‌ಪೆಕ್ಟರ್,
(ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ)

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**

// ಆದೇಶಾನುಸಾರ :: ರವಾನಿಸಲಾಗಿದೆ//

ಶಾಖಾಧಿಕಾರಿ

**ನಮೂನೆ ಸಂಖ್ಯೆ. 11**

(9ನೇ ನಿಯಮದ (2)ನೇ ಉಪ–ನಿಯಮವನ್ನು ನೋಡಿ)

ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017–ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ನಿಯಮಗಳು, 2018ರ 10(iii) ರ ನಿಯಮದ ಮೇರೆಗೆ ಕಾರ್ಯಸಂಸ್ಥೆಯನ್ನು ಸೀಲ್ ಮಾಡುವುದಕ್ಕಾಗಿ ಮೇಲ್ವಿಚಾರಣಾ ಸಮಿತಿಯಿಂದ ಕಾರಣ ಕೇಳುವ ನೋಟೀಸು

**ಸಂಖ್ಯೆ.** **ದಿನಾಂಕ:**

**ಇವರಿಗೆ,**

ಮಾಲೀಕ/ ವ್ಯವಸ್ಥಾಪಕ/ ವ್ಯಕ್ತಿ ಅಥವಾ ವ್ಯಕ್ತಿಗಳು/
ಸಂಘ. . .. .. . ಕಾರ್ಯಸಂಸ್ಥೆಯ ಹೆಸರು.

**ಮಾನ್ಯರೆ,**

**ವಿಷಯ**: ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017–ಕಾರ್ಯಸಂಸ್ಥೆಯ ಪರಿಶೀಲನೆ–ನಿಯಮಗಳನ್ನು ಪಾಲಿಸದಿರುವುದಕ್ಕೆ ಸಂಬಂಧಪಟ್ಟಂತೆ ಕಾರ್ಯಸಂಸ್ಥೆಯನ್ನು ಸೀಲ್ ಮಾಡುವುದಕ್ಕಾಗಿ ಕಾರಣ ಕೇಳುವ ನೋಟೀಸು.

**ಉಲ್ಲೇಖ**: 1. ಮೊದಲನೇ ತಿಂಗಳ ರಾಜಿಮಾಡಿಕೊಳ್ಳುವ ಶುಲ್ಕದ ಆದೇಶದ ದಿನಾಂಕ. . .
2. ಎರಡನೇ ತಿಂಗಳ ರಾಜಿಮಾಡಿಕೊಳ್ಳುವ ಶುಲ್ಕದ ಆದೇಶದ ದಿನಾಂಕ
**3**. ಪೊಲೀಸ್ ಇನ್ಸ್‌ಪೆಕ್ಟರ್‌ರವರ ವರದಿ, ದಿನಾಂಕ:. . .. . . .

* * *

ನಿಮ್ಮ ಕಾರ್ಯಸಂಸ್ಥೆಯನ್ನು, ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017ರ ಅಡಿಯಲ್ಲಿ ಕಾರ್ಯಸಂಸ್ಥೆಯಂತೆ ಗುರುತಿಸಲಾಗಿರುವುದರಿಂದಾಗಿ;

2. ನೀವು ಅಧಿನಿಯಮದಲ್ಲಿ ಪರಿಗಣಿಸಲಾದಂತೆ ಸುರಕ್ಷತೆ ಮತ್ತು ಭದ್ರತೆಯ ಸಾಧನ ಸಾಮಗ್ರಿಗಳನ್ನು ಅಳವಡಿಸಿಕೊಳ್ಳಲುಕರ್ತವ್ಯಬದ್ಧರಾಗಿರುವುದರಿಂದಾಗಿ;

3.. . . . . . . . . ರಂದು ನಿಮ್ಮ ಕಾರ್ಯಸಂಸ್ಥೆಯನ್ನು . . .. . . ಪೊಲೀಸ್ ಇನ್ಸ್‌ಪೆಕ್ಟರ್‌ರವರು ಪರಿಶೀಲಿಸಿರುವುದರಿಂದ ಈ ಮುಂದಿನ ಉಲ್ಲಂಘನೆಗಳು ರುಜುವಾತಾಗಿವೆ.

| | |
|---|---|
| (1) | |
| (2) | |
| (3) | |
| (4) | |

4. ಆದ್ದರಿಂದ, ನಿಮಗೆ, ಕಾರಣ ಕೇಳುವ ನೋಟೀಸಿನೊಂದಿಗೆ ಅದನ್ನು ನೀಡಲಾಗಿದ್ದರೂ ನೀವು ಅದನ್ನು ಪಾಲಿಸಿರುವುದಿಲ್ಲ. ಆ ಕಾರಣದಿಂದ, ನಿಮಗೆ ಹೇಳಲಾದ 1ನೇ ಉಲ್ಲೇಖವನ್ನು ನೋಡಿ5,000/– ರೂ.ಗಳ ಮೊದಲ ತಿಂಗಳ ರಾಜಿಮಾಡಿಕೊಳ್ಳುವ ಶುಲ್ಕವನ್ನು ಸಹ ವಿಧಿಸಲಾಗಿದೆ ಮತ್ತು ಎರಡನೇ ತಿಂಗಳಿಗೆ ಹೇಳಲಾದ 2ನೇ ಉಲ್ಲೇಖವನ್ನು ನೋಡಿ 10,000/– ರೂ.ಗಳ ರಾಜಿ ಮಾಡಿಕೊಳ್ಳುವ ಶುಲ್ಕವನ್ನು ಸಹ ವಿಧಿಸಲಾಗಿದೆ. ನೀವು, ಈ ನಿಯಮಗಳನ್ನು ಪಾಲಿಸುವುದಕ್ಕೆ ವಿಫಲವಾಗಿದ್ದರೂ, ಆದರೆ ಎರಡನೇ ತಿಂಗಳ ರಾಜಿಮಾಡಿಕೊಳ್ಳುವ ಶುಲ್ಕವನ್ನು ವಿಧಿಸಿದ ದಿನಾಂಕದಿಂದ ಮುಕ್ತಾಯವಾಗುವುದು. ನೀವು ಅದನ್ನು ಪಾಲಿಸದಿರುವುದಕ್ಕೆ ಪೊಲೀಸ್ ಇನ್ಸ್‌ಪೆಕ್ಟರವರು ಹೇಳಲಾದ 3ನೇ ಉಲ್ಲೇಖವನ್ನು ನೋಡಿ ವರದಿ ಮಾಡಲಾಗಿದೆ ಎಂದುಉಲ್ಲೇಖಿಸಲಾಗಿದೆ;

5. ಆದ್ದರಿಂದ, ನೀವು, ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2016ರ ಉಪಬಂಧಗಳ ಅಡಿಯಲ್ಲಿ ನಿಮ್ಮ ಕಾರ್ಯಸಂಸ್ಥೆಯನ್ನು ಏಕೆ ಸೀಲ್ ಮಾಡಿಲ್ಲವೆಂದು ಕಾರಣ ಕೇಳುವುದಕ್ಕೆ ಈ ಮೂಲಕ ಕರೆಯಲಾಗಿದೆ. ನೀವು ವಿವರಣೆಯನ್ನು 07 ದಿನಗಳೊಳಗೆ ಸಮಿತಿಗೆ ತಲುಪಿಸುವುದು.

ಸದಸ್ಯರ ಸಂಖ್ಯೆ. 1 ಸದಸ್ಯರ ಸಂಖ್ಯೆ. 2 ಸದಸ್ಯರ ಸಂಖ್ಯೆ. 3

ಪ್ರತಿ: . . . . . . ಪೊಲೀಸ್ ಇನ್ಸ್‌ಪೆಕ್ಟರ್

: ಆತನು ಮಾಲೀಕ/ ವ್ಯವಸ್ಥಾಪಕ ವ್ಯಕ್ತಿ ಅಥವಾ ವ್ಯಕ್ತಿಗಳು/ ಸಂಘದ ಮೇಲೆ ಮೂಲ ಮಾಲೀಕನಿಗೆ ಜಾರಿಮಾಡುವುದು ಮತ್ತು ಈ ಕಛೇರಿಗೆ ಸ್ವೀಕೃತಿಯ ಪ್ರತಿಯನ್ನು ಕಳುಹಿಸಲಾಗಿದೆ.

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**

// ಆದೇಶಾನುಸಾರ :: ರವಾನಿಸಲಾಗಿದೆ//

ಶಾಖಾಧಿಕಾರಿ

**ನಮೂನೆ ಸಂಖ್ಯೆ. 12**

(6ನೇ ನಿಯಮದ (5)ನೇ ಉಪ–ನಿಯಮ ಮತ್ತು 9ನೇ ನಿಯಮದ (4)ನೇ ಉಪ–ನಿಯಮ ನೋಡಿ)

ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017–ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ನಿಯಮಗಳು, 2018ರ ನಿಯಮ 10(v) ರ ಮೇರೆಗೆ

ಕಾರ್ಯಸಂಸ್ಥೆಗಳಿಗೆ ಸೀಲ್ ಮಾಡುವ ಆದೇಶ

**ಕರ್ನಾಟಕ ಸರ್ಕಾರ**
ದಿನಾಂಕ:**ಸಂಖ್ಯೆ:**
**ಕಾರ್ಯಸಂಸ್ಥೆಗೆ ಸೀಲು ಮಾಡುವ ಆದೇಶ**

**ಮಾನ್ಯರೆ,**

**ವಿಷಯ:** ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017– ಕಾರ್ಯಸಂಸ್ಥೆಯ ಪರಿಶೀಲನೆ–ನಿಯಮಗಳನ್ನು ಪಾಲಿಸದಿರುವುದು– ಸಂಬಂಧಪಟ್ಟ ಕಾರ್ಯಸಂಸ್ಥೆಯನ್ನು ಸೀಲ್ ಮಾಡುವ ಆದೇಶ.

**ಉಲ್ಲೇಖ:** 1. ಮೊದಲನೇ ತಿಂಗಳ ರಾಜಿಮಾಡಿಕೊಳ್ಳುವ ಶುಲ್ಕದ ದಿನಾಂಕ :––––
2. ಎರಡನೇ ತಿಂಗಳ ರಾಜಿಮಾಡಿಕೊಳ್ಳುವ ಶುಲ್ಕದ ಆದೇಶದ ದಿನಾಂಕ:–––
3. ಪೊಲೀಸ್ ಇನ್ಸ್‌ಪೆಕ್ಟರ್‌ರವರ ವರದಿ, ದಿನಾಂಕ: ––––––
4. ಸಮಿತಿಯಿಂದ ಕಾರಣ ಕೇಳುವ ನೋಟೀಸಿನ ದಿನಾಂಕ:––––––

* * *

ಶ್ರೀ/ಶ್ರೀಮತಿ –––––––––––––––––––––– ರವರ ಕಾರ್ಯಸಂಸ್ಥೆಯನ್ನು ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2016ರ ಅಡಿಯಲ್ಲಿ ಕಾರ್ಯಸಂಸ್ಥೆಯಂತೆ ಗುರುತಿಸಲಾಗಿರುವುದರಿಂದ;

2. ನೀವು, ಸದರಿ ಅಧಿನಿಯಮದಲ್ಲಿ ಪರಿಗಣಿಸಲಾದಂತೆ ಸುರಕ್ಷತೆ ಮತ್ತು ಭದ್ರತೆಯ ಸಾಧನ ಸಾಮಗ್ರಿಗಳನ್ನು ಇರಿಸುವುದಕ್ಕೆ ಕರ್ತವ್ಯಬದ್ಧರಾಗಿರುವುದರಿಂದ;

3 ––––––––––– ರಂದು ನಿಮ್ಮ ಕಾರ್ಯಸಂಸ್ಥೆಯನ್ನು –––––––––– ಪೊಲೀಸ್ ಇನ್ಸ್‌ಪೆಕ್ಟರ್‌ರವರು ಪರಿಶೀಲಿಸಿದ್ದಾರೆ ಮತ್ತು ಮುಂದಿನ ಉಲ್ಲಂಘನೆಗಳು ರುಜುವಾತಾಗಿವೆ.

| | |
|---|---|
| (1) | |
| (2) | |
| (3) | |
| (4) | |

4. ಆದ್ದರಿಂದ, ಕಾರಣ ಕೇಳುವ ನೋಟೀಸಿನೊಂದಿಗೆ ನೀಡಲಾಗಿದ್ದರೂ , ಅವರು, ಅದನ್ನು ಪಾಲಿಸಿರುವುದಿಲ್ಲ. ಆ ಕಾರಣದಿಂದ, ಅವರಿಗೆ ಹೇಳಲಾದ 1ನೇ ಉಲ್ಲೇಖವನ್ನು ನೋಡಿ ಮೊದಲ ತಿಂಗಳ ರಾಜಿಮಾಡಿಕೊಳ್ಳುವ ಶುಲ್ಕ 5,000/- ರೂ.ಗಳನ್ನು ಸಹ ವಿಧಿಸಲಾಗಿದೆ ಮತ್ತು ಅವರಿಗೆ ಅದನ್ನು ನೀಡಲಾಗಿದ್ದರೂ ಅದರ ಅಗತ್ಯತೆಗಳನ್ನು ಪಾಲಿಸದಿರುವುದರಿಂದ, ಹೇಳಲಾದ 2ನೇ ಉಲ್ಲೇಖವನ್ನು ನೋಡಿ ಎರಡನೇ ತಿಂಗಳ ರಾಜಿಮಾಡಿಕೊಳ್ಳುವ ಶುಲ್ಕ 10,000/- ರೂ. ಗಳನ್ನುಸಹ ವಿಧಿಸಲಾಗಿದೆ;

5. ಎರಡು ತಿಂಗಳ ಸಮಯವು, ಎರಡನೇ ತಿಂಗಳ ರಾಜಿಮಾಡಿಕೊಳ್ಳುವ ಶುಲ್ಕವನ್ನು ವಿಧಿಸಲಾದ ದಿನಾಂಕದಿಂದ ಮುಕ್ತಾಯವಾಗಿರುವಾಗ, ಆದರೆ ಅವರಿಗೆ ಅದನ್ನು ನೀಡಲಾಗಿದ್ದರೂ ಆ ಅಗತ್ಯತೆಗಳನ್ನು ಪಾಲಿಸಲು ವಿಫಲರಾಗಿದ್ದಾರೆ. ಅವರು, ಅದನ್ನು ಪಾಲಿಸಿರುವುದಿಲ್ಲವೆಂದು ವರದಿ ಮಾಡಿ ಹೇಳಲಾದ 3ನೇ ಉಲ್ಲೇಖವನ್ನು ನೋಡಿ ---------- ಪೊಲೀಸ್ ಇನ್ಸ್‌ಪೆಕ್ಟ್‌ರವರಿಂದ ಒಂದು ವರದಿಯನ್ನು ಸಲ್ಲಿಸಲಾಗಿದೆ. ಹೇಳಲಾದ 4ನೇ ಉಲ್ಲೇಖವನ್ನು ನೋಡಿ ಅವರಿಗೆ ಅದನ್ನು ನೀಡಲಾಗಿದ್ದರೂ, ಆದರೆ, ಈ ನಿಯಮಗಳನ್ನು ಪಾಲಿಸದಿರುವುರಿಂದ ಅಂಥ ಕಾರಣಕೇಳುವ ನೋಟೀಸನ್ನು ಸಹ ನೀಡಲಾಗಿದೆ.

6. ಆದ್ದರಿಂದ, ಮೇಲ್ಕಂಡ 10(v) ನೇ ನಿಯಮಗಳ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಶ್ರೀ/ಶ್ರೀಮತಿ ----- ರವರು ಸೀಲ್ ಮಾಡುವುದಕ್ಕಾಗಿ ಈ ಮೂಲಕ ಆದೇಶಿಸಲಾಗಿದ್ದು, ಲೈಸೆನ್ಸ್ ಪ್ರಾಧಿಕಾರಕ್ಕೆ ಕಾರ್ಯಸಂಸ್ಥೆಯನ್ನು ಸೀಲ್ ಮಾಡಿದ ತರುವಾಯ ತಾವು ವರದಿಯನ್ನು ಸಲ್ಲಿಸಬಹುದು.

ಸದಸ್ಯರ ಸಂಖ್ಯೆ. 1 ಸದಸ್ಯರ ಸಂಖ್ಯೆ. 2

ಸದಸ್ಯರ ಸಂಖ್ಯೆ. 3

ಪ್ರತಿ: ಪೊಲೀಸ್ ಇನ್ಸ್‌ಪೆಕ್ಟರ್,

------------------

ಪ್ರತಿಗಳು: ಮಾಲೀಕ/ ವ್ಯವಸ್ಥಾಪಕ/ ವ್ಯಕ್ತಿ ಅಥವಾ ವ್ಯಕ್ತಿಗಳು/ ಕಾರ್ಯಸಂಸ್ಥೆಯ ಸಂಘ.

-----------ಲೈಸನ್ಸ್ ಪ್ರಾಧಿಕಾರ

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**

// ಆದೇಶಾನುಸಾರ :: ರವಾನಿಸಲಾಗಿದೆ//

ಶಾಖಾಧಿಕಾರಿ

**ನಮೂನೆ ಸಂಖ್ಯೆ. 13**

(6ನೇ ನಿಯಮದ (5)ನೇ ಉಪ–ನಿಯಮವನ್ನು ನೋಡಿ)

ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017–ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ನಿಯಮಗಳು, 2018ರ 7(v) ನೇ ನಿಯಮದ 6(3)ನೇ ಪ್ರಕರಣದ ಮೇರೆಗೆ ಕಾರ್ಯಸಂಸ್ಥೆಗಳನ್ನು ಸೀಲ್ ಮಾಡುವುದು

**(ನಾಲ್ಕು ಪ್ರತಿಗಳಲ್ಲಿ ಭರ್ತಿಮಾಡಬೇಕಾದುದು)**

| ಕಾರ್ಯಸಂಸ್ಥೆಯ ಸಂಕೇತ: | |
|---|---|

| | | |
|---|---|---|
| (1) | ಕಾರ್ಯಸಂಸ್ಥೆ/ ಸಂಸ್ಥೆಯ ಹೆಸರು | |
| (2) | ದೂರವಾಣಿ, ಮೊಬೈಲ್ ಸಂಖ್ಯೆ, ಇ–ಮೇಲ್ ಐಡಿಯೊಂದಿಗೆ ಪೂರ್ಣ ವಿಳಾಸ | |
| (3) | ಸಮಿತಿಯು ಸೀಲ್ ಮಾಡಿರುವ ಆದೇಶ ಸಂಖ್ಯೆ ಮತ್ತು ದಿನಾಂಕ | |
| (4) | ಕಾರ್ಯಸಂಸ್ಥೆಯಲ್ಲಿ ಸಂಗ್ರಹಿಸಲಾದ ಯಾವುದೇ ನಶಿಸಿಹೋಗುವ ವಸ್ತುಗಳು | |
| (5) | ಸೀಲ್ ಮಾಡಿದ ದಿನಾಂಕ ಮತ್ತು ಸಮಯ | |
| (6) | ಸೀಲ್ ಮಾಡುವ ಸಮಯದಲ್ಲಿ ಹಾಜರಿದ್ದ ಮಾಲೀಕ/ ವ್ಯವಸ್ಥಾಪಕ/ ವ್ಯಕ್ತಿ ಅಥವಾ ವ್ಯಕ್ತಿಗಳ/ ಸಂಘ | |
| (7) | ಕಾರ್ಯಸಂಸ್ಥೆಯಲ್ಲಿ ಲಭ್ಯವಿರುವ ಅವನತಿ / ಹಾನಿ/ ನಾಶಕ್ಕೆ ಒಳಪಡುವ ಯಾವುದೇ ನಾಶಹೊಂದುವ ಸರಕುಗಳಿವೆಯೇ | ನಾಶಹೊಂದುವ ಸರಕುಗಳು ಕಾರ್ಯಸಂಸ್ಥೆಯಲ್ಲಿ ಲಭ್ಯವಿಲ್ಲ |

ಸ್ವತಂತ್ರ ಸಾಕ್ಷಿದಾರರು:
1. ಕ್ಯೂ
2.

| ಕಾರ್ಯಸಂಸ್ಥೆಯ ಮಾಲೀಕ/ ವ್ಯವಸ್ಥಾಪಕ/ ವ್ಯಕ್ತಿ ಅಥವಾ ವ್ಯಕ್ತಿಗಳಸಂಘದ ಸಹಿ | ಪೊಲೀಸ್ ಇನ್ಸ್‌ಪೆಕ್ಟರ್‌ರವರ ಸಹಿ (ಆ ಪ್ರದೇಶದ ಮೇಲೆ ಅಧಿಕಾರಿ ವ್ಯಾಪ್ತಿ ಹೊಂದಿರುವ) |
|---|---|

1. ಲೈಸನ್ಸ್ ಪ್ರಾಧಿಕಾರಕ್ಕೆ ಕಳುಹಿಸಬೇಕಾದ ಒಂದು ಪ್ರತಿ
2. ಮಾಲೀಕ/ ವ್ಯವಸ್ಥಾಪಕ/ ವ್ಯಕ್ತಿ ಅಥವಾ ವ್ಯಕ್ತಿಗಳು/ ಕಾರ್ಯಸಂಸ್ಥೆಯ ಸಂಘಕ್ಕೆ ಒಂದು ಪ್ರತಿ
3. ಸಮಿತಿಗೆ ಒಂದು ಪ್ರತಿ
4. ಕಛೇರಿಯ ಒಂದು ಪ್ರತಿ

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**

// ಆದೇಶಾನುಸಾರ :: ರವಾನಿಸಲಾಗಿದೆ//

**ಶಾಖಾಧಿಕಾರಿ**

**ನಮೂನೆ ಸಂಖ್ಯೆ. 14**

(6ನೇ ನಿಯಮದ (7)ನೇ ಉಪ–ನಿಯಮವನ್ನು ನೋಡಿ)

ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017ರ 6(3)ನೇ ಪ್ರಕರಣದ ಮೇರೆಗೆ– ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ನಿಯಮಗಳು, 2017ರ 7(vii) ನೇ ನಿಯಮದ ಮೇರೆಗೆ ಕಾರ್ಯಸಂಸ್ಥೆಗಳು ಮೊಹರು ಮಾಡಿದ ತರುವಾಯ ಲೈಸನ್ಸ್ ಪ್ರಾಧಿಕಾರಕ್ಕೆ ನೀಡುವ ವರದಿಯ ನಮೂನೆ

ಕರ್ನಾಟಕ ಸರ್ಕಾರ

(ಪೊಲೀಸ್ ಇಲಾಖೆ)

ಪೊಲೀಸ್ ಇನ್ಸ್‌ಪೆಕ್ಟರ್‌ರವರ ಕಛೇರಿ

ಪೊಲೀಸ್ ಠಾಣೆ/ . . . . . . . .. . ವೃತ್ತ

ಸಂಖ್ಯೆ. ದಿನಾಂಕ:

**ಇವರಿಗೆ,**
ಲೈಸನ್ಸ್ ಪ್ರಾಧಿಕಾರ
________________ ವಿಭಾಗ

(ಆ ಪ್ರದೇಶದ ಅಧಿಕಾರವ್ಯಾಪ್ತಿ ಹೊಂದಿರುವ ಸಹಾಯಕ ಪೊಲೀಸ್ ಆಯುಕ್ತರು/ ಉಪ–ವಿಭಾಗೀಯ ಅಧಿಕಾರಿಯ ಮೂಲಕ)

**ಮಾನ್ಯರೆ,**

**ವಿಷಯ**: ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017– ಕಾರ್ಯಸಂಸ್ಥೆಯುಸೀಲ್ ಮಾಡುವುದು–ಸಂಬಂಧಪಟ್ಟ ವರದಿಯನ್ನು ಸಲ್ಲಿಸುವುದು.

**ಉಲ್ಲೇಖ**: 1. ಸೀಲ್ ಮಾಡಿದ ಆದೇಶ ಸಂಖ್ಯೆ . . . . . . .

* * *

ಶ್ರೀ/ಶ್ರೀಮತಿ. . . . . . . . . . . ರವರು (ಕಾರ್ಯಸಂಸ್ಥೆಯ ಸಂಕೇತ ಸಂಖ್ಯೆ –––) ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017ರ ಅಗತ್ಯತೆಗಳನ್ನು ಪಾಲಿಸದಿರುವುದು ರುಜುವಾತಾಗಿರುವ ಬಗ್ಗೆ ನಾನು ವರದಿ ಸಲ್ಲಿಸಿದ್ದೇನೆ. ಅಂಥ ವರದಿಗಳನ್ನು ಕಳುಹಿಸಲಾಗಿದೆ ಮತ್ತು ಅದಕ್ಕನುಸಾರವಾಗಿ ಮೊದಲ ಮತ್ತು ಎರಡನೇ ತಿಂಗಳ ರಾಜಿಮಾಡಿಕೊಳ್ಳುವ ಶುಲ್ಕವನ್ನು ವಿಧಿಸಲಾಗಿದೆ. ಆದಾಗ್ಯೂ, ಎರಡು ತಿಂಗಳುಗಳ ಎರಡನೇ ತಿಂಗಳ ರಾಜಿಮಾಡಿಕೊಳ್ಳುವ ಶುಲ್ಕದ ದಿನಾಂಕದಿಂದ

ಮುಕ್ತಾಯವಾಗಿದ್ದು, ಕಾರ್ಯಸಂಸ್ಥೆಯ ಮಾಲೀಕ/ ವ್ಯವಸ್ಥಾಪಕ ಅಗತ್ಯತೆಗಳನ್ನು ಪಾಲಿಸದಿರುವ ಬಗ್ಗೆ ಒಂದು ವರದಿಯನ್ನು ಸಮಿತಿಗೆ ಸಲ್ಲಿಸಲಾಗಿದೆ ಮತ್ತು ಕಾರಣ ಕೇಳುವ ನೋಟೀಸನ್ನು ಸಹ ನೀಡಲಾಗಿದೆ. ಸಮಿತಿಯು ದಾಖಲೆಗಳನ್ನು ಪರಿಶೀಲಿಸಿದ ತರುವಾಯ ಹೇಳಲಾದ ಉಲ್ಲೇಖವನ್ನು ನೋಡಿ ಸೀಲ್ ಮಾಡಿರುವ ಆದೇಶಗಳನ್ನು ನೀಡಲಾಗಿದೆ. ಆದೇಶಗಳಿಗೆ ವಿಧೇಯವಾಗಿ, ಕಾರ್ಯಸಂಸ್ಥೆಯು, ಸೀಲ್ ಮಾಡಿ ಲಗತ್ತಿಸಲಾದ ವರದಿಯನ್ನು . . . . . . . . . ರಂದು ಮೊಹರು ಮಾಡಲಾಗಿದೆ.

ಇದು ಮಾಹಿತಿಗಾಗಿ ಅನುಕೂಲವಾಗಲಿದೆ.

ತಮ್ಮ ವಿಶ್ವಾಸಿ,

(ಪೊಲೀಸ್ ಇನ್ಸ್‌ಪೆಕ್ಟರ್)
(ಈ ಪ್ರದೇಶದ ಅಧಿಕಾರವ್ಯಾಪ್ತಿ ಹೊಂದಿರುವ)

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**

// ಆದೇಶಾನುಸಾರ :: ರವಾನಿಸಲಾಗಿದೆ//

ಶಾಖಾಧಿಕಾರಿ

**ನಮೂನೆ ಸಂಖ್ಯೆ. 15**

(5ನೇ ನಿಯಮದ (1)ನೇ ಉಪ–ನಿಯಮವನ್ನು ನೋಡಿ)

(ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2018, ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ನಿಯಮಗಳು, 2017ರ 6(i) ನೇ ನಿಯಮದ 4(1)ನೇ ಪ್ರಕರಣದ ಮೇರೆಗೆ ನಿಯತಕಾಲಿಕ ವಿವರಪಟ್ಟಿಯ ನಮೂನೆಯನ್ನು ಪ್ರತಿ 6 ತಿಂಗಳಿಗೊಮ್ಮೆ ಕಾರ್ಯಸಂಸ್ಥೆಯನ್ನು ನಡೆಸುತ್ತಿರುವ ಪ್ರತಿಯೊಬ್ಬ ಮಾಲೀಕ/ ವ್ಯವಸ್ಥಾಪಕ/ ವ್ಯಕ್ತಿ ಅಥವಾ ವ್ಯಕ್ತಿಗಳಿಂದ ಸಲ್ಲಿಸಬೇಕಾದುದು)

| | | |
|---|---|---|
| (1) | ಸ್ಥಳದಲ್ಲಿರುವ ಕಾರ್ಯಸಂಸ್ಥೆ/ ಸಂಸ್ಥೆಯ ಹೆಸರು (ಕಾರ್ಯಸಂಸ್ಥೆಯ ನೋಂದಣಿ ಸಂಖ್ಯೆ) | |
| (2) | ಅಳವಡಿಸಿದ ಎಲೆಕ್ಟ್ರಾನಿಕ್ ಸಾಧನಗಳು ಮತ್ತು ಸಾಧನಸಾಮಗ್ರಿಗಳ ವಿವರಗಳು) | |
| | (i) ನಿಯಂತ್ರಣ/ ಗಮ್ಯ ನಿಯಂತ್ರಕಗಳ ಸಾಧನಗಳು. | |
| | (ii) ಸಿಸಿಟಿವಿ ಕ್ಯಾಮರಗಳು (ನಿಗಾವಣೆ) | |
| (3) | ಅಳವಡಿಸಿರುವ ಸ್ಥಳಗಳು | |
| (4) | ಅಳವಡಿಸಲಾದ ದಿನಾಂಕ ಮತ್ತು ಸಮಯ | |
| (5) | ಕಾರ್ಯ ಷರತ್ತುಗಳಿರಲಿ ಅಥವಾ ಇಲ್ಲದಿರಲಿ ಸಮೀಪದ ಪ್ರದೇಶಗಳ ವ್ಯಾಪ್ತಿಯನ್ನೊಳಗೊಂಡ ಅಂತರವನ್ನು ಒಳಗೊಂಡಿರುವ ಪ್ರದೇಶದಲ್ಲಿರುವುದು ಸುಸ್ಥಿತಿಯಲ್ಲಿದೆಯೇ ಅಥವಾ ಇಲ್ಲವೇ | |
| (6) | ಕಾರ್ಯನಿರ್ವಹಿಸುವ ಇಂಜಿನಿಯರ್‌ರಿಂದ ಕೊನೆಯದಾಗಿ ಸಾಧನಗಳನ್ನು ಪರಿಶೀಲಿಸಿರುವಾಗ | |
| (7) | ಕಾರ್ಯಸಂಸ್ಥೆಯನ್ನುಪೊಲೀಸ್ ಅಧಿಕಾರಿಯಿಂದ ಪರಿಶೀಲಿಸಿರುವಾಗ | |
| (8) | ದತ್ತಾಂಶ ವರ್ಗಾವಣೆಗಾಗಿ ಸೌಲಭ್ಯ ಲಭ್ಯವಿದೆಯೇ | |

| | | |
|---|---|---|
| | ಅಥವಾ ಇಲ್ಲವೇ | |
| (9) | ಕೊನೆಯ ನಿಯತಕಾಲಿಕ ವಿವರಪಟ್ಟಿಯನ್ನು ದಾಖಲುಮಾಡಲಾದ ದಿನಾಂಕ | |

ಕಾರ್ಯಸಂಸ್ಥೆಯ ಮಾಲೀಕ/ ವ್ಯವಸ್ಥಾಪಕ
ವ್ಯಕ್ತಿ ಅಥವಾ ವ್ಯಕ್ತಿಗಳು, ಸಂಸ್ಥೆ

**ಟಿಪ್ಪಣಿ:** ನಮೂನೆಯನ್ನು, ವಿದ್ಯುದ್ಮಾನ ಅಥವಾ ವಾಸ್ತವಿಕ ವಿಧಾನದ ಮೂಲಕವಾಗಿಯಾಗಲಿ ಸಲ್ಲಿಸಬಹುದು

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**

// ಆದೇಶಾನುಸಾರ :: ರವಾನಿಸಲಾಗಿದೆ//

ಶಾಖಾಧಿಕಾರಿ

**ನಮೂನೆ ಸಂಖ್ಯೆ. 16**

(5ನೇ ನಿಯಮದ (2)ನೇ ಉಪ–ನಿಯಮವನ್ನು ನೋಡಿ)
ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ಅಧಿನಿಯಮ, 2017, 4(2)ನೇ ಪ್ರಕರಣದ ಅಡಿಯಲ್ಲಿ,
ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಜಾರಿ ನಿಯಮಗಳು, 2018ರ ಅನುಬಂಧ.
(ಲೈಸನ್ಸ್ ಪ್ರಾಧಿಕಾರಕ್ಕೆ ನವೀಕರಣ ಅರ್ಜಿಯನ್ನು ಲಗತ್ತಿಸಬೇಕಾದುದು ಮತ್ತು ಅನ್ವಯಿಸುತ್ತದೆ)

. . . . . . . . . . ರವರ ಮಗನಾದ ನಾನು/ನಾವು . . . . . . ವಯಸ್ಸಿನವನಾಗಿದ್ದು. . . . . . . . . . ವರ್ಷಗಳಿಂದ . . . . . . . . . . . . ನಿವಾಸಿಯಾಗಿದ್ದು ಮಾಲೀಕ/ ವ್ಯವಸ್ಥಾಪಕ/ ವ್ಯಕ್ತಿ ಅಥವಾ ವ್ಯಕ್ತಿಗಳು/ ಕಾರ್ಯಸಂಸ್ಥೆಯ ಸಂಘದಲ್ಲಿರುವಾಗ, ಕರ್ನಾಟಕ ಸಾರ್ವಜನಿಕ ಸುರಕ್ಷತಾ (ಕ್ರಮಗಳ) ಅಧಿನಿಯಮ, 2017 ರ ಅಡಿಯಲ್ಲಿ ಅಗತ್ಯಪಡಿಸಲಾದಂತೆ ಎಲೆಕ್ಟ್ರಾನಿಕ್ ಸಾಧನಗಳನ್ನು ಕಾರ್ಯಸಂಸ್ಥೆಯಲ್ಲಿ ಅಳವಡಿಸಿಕೊಳ್ಳಲಾಗಿದೆ ಮತ್ತು ಅವುಗಳನ್ನು ಪರಿಶೀಲಿಸಿದ ದಿನಾಂಕದಂತೆ ಉತ್ತಮ ಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ ಮತ್ತು ಈ ಉಲ್ಲೇಖಕ್ಕಾಗಿ ಸಂಬಂಧಪಟ್ಟಂತೆ ಸಂಗ್ರಹಿಸಲಾಗಿದೆ ಎಂಬುದರ ಬಗ್ಗೆ ಈ ಮೂಲಕ ಘೋಷಣೆಮಾಡಲಾಗಿದೆ.

2. ಮೇಲ್ಕಂಡ ಸಂಗತಿಗಳು ನಾನು/ ನನ್ನ ತಿಳಿವಳಿಕೆಯ ಮಟ್ಟಿಗೆ ಸರಿಯಾಗಿದೆ ಮತ್ತು ಸತ್ಯವಾಗಿವೆ. ಯಾವುದೇ ಮಾಹಿತಿಯ ಸಂದರ್ಭದಲ್ಲಿ, ಮೇಲ್ಕಂಡ ಘೋಷಣೆಯು ಸರಿಯಾಗಿಲ್ಲವೆಂದು ಕಂಡುಬಂದರೆ, ನಾನು/ನಾವು ಕಾನೂನಿನ ಅಡಿಯಲ್ಲಿ ಕ್ರಮಕೈಗೊಳ್ಳುವುದಕ್ಕಾಗಿ ಹೊಣೆಗಾರರಾಗಿರುತ್ತೇವೆ.

ಕಾರ್ಯಸಂಸ್ಥೆಯ ಮಾಲೀಕ/ ವ್ಯವಸ್ಥಾಪಕ
ವ್ಯಕ್ತಿ ಅಥವಾ ವ್ಯಕ್ತಿಗಳು/ ಸಂಘ

***